ಸಂಪುಟ 01 | ಸಂಚಿಕೆ 149 | ಮಂಗಳವಾರ 21 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707586, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ನಾಗರಿಕ ಸೇವಾ ದಿನ**

ಪ್ರತಿ ವರ್ಷ ಏಪ್ರಿಲ್ 21 ರಂದು ನಾಗರಿಕ ಸೇವಾ ದಿನವನ್ನು ಜನರ ಪರವಾಗಿ ತಮ್ಮನ್ನು ತಾವು ಪುನರ್ ಸಮರ್ಪಿಸಿಕೊಳ್ಳಲು ಮತ್ತು ಪುನಃ ಸಮರ್ಪಿಸಿಕೊಳ್ಳಲು ಆಚರಿಸಲಾಗುತ್ತದೆ. ಈ ದಿನದಂದು ದೇಶದ ವಿವಿಧ ಭಾಗಗಳಿಂದ ನಾಗರಿಕ ಸೇವಕರು ಒಟ್ಟುಗೂಡುತ್ತಾರೆ, ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಸಾರ್ವಜನಿಕ ವಲಯದಲ್ಲಿ ಕೆಲಸ ಮಾಡುವ ಇತರರ ಅನುಭವಗಳ ಬಗ್ಗೆ ತಿಳಿದುಕೊಳ್ಳುತ್ತಾರೆ.

**2) ಆದಿ ಶಂಕರಾಚಾರ್ಯರ ಜಯಂತಿ**

ಆದಿ ಶಂಕರಾಚಾರ್ಯರ ಜಯಂತಿಯು ಹಿಂದೂ ಧರ್ಮದ ಅತ್ಯಂತ ಮಹತ್ವದ ದಿನಗಳಲ್ಲಿ ಒಂದಾಗಿದ್ದು, ಅದ್ವೈತ ವೇದಾಂತದ ಪ್ರತಿಪಾದಕರಾದ ಶಂಕರಾಚಾರ್ಯರ ಜನ್ಮದಿನವನ್ನು ಆಚರಿಸಲಾಗುತ್ತದೆ.ಹಿಂದೂ ಪಂಚಾಂಗದ ಪ್ರಕಾರ, ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿಯಂದು ಇವರ ಜನ್ಮದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

ಸಂತೋಷದಿಂದ ಇರುವುದು, ಸಂತೋಷದಿಂದ ಒಡಗೂಡಿದ ಕುಟುಂಬವನ್ನು ಹೊಂದುವುದು ಮತ್ತು ಅಂತಿಮವಾಗಿ ಸಂತೋಷದಾಯಕ ಜಗತ್ತನ್ನು ಹೊಂದುವುದು ನಮ್ಮ ಮೂಲಭೂತ ಹಕ್ಕು. ಅದೇ ನಮ್ಮ ಗುರಿಯಾಗಿರಬೇಕು.

ದಲೈಲಾಮ

# ಒಳ ಮೀಸಲಾತಿಯ ಗೊಂದಲ ಬಗೆಹರಿಸಲು ಇದೇ 24ರಂದು ವಿಶೇಷ ಸಚಿವ ಸಂಪುಟಸಭೆ



**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಒಳ ಮೀಸಲಾತಿಯ ಗೊಂದಲವನ್ನು ಬಗೆಹರಿಸಲು ಇದೇ 24 ರಂದು ವಿಶೇಷ ಸಚಿವ ಸಂಪುಟಸಭೆ ನಿಗದಿ ಮಾಡಿದೆ. ಒಳ ಮೀಸಲಾತಿ ವಿಚಾರವಾಗಿ ಪರಿಶಿಷ್ಟ ಜಾತಿಯ ಎಡಗೈ ಮತ್ತು ಬಲಗೈ ಸಮುದಾಯಗಳ ನಡುವೆ ಅಸಮಾಧಾನಗಳಿವೆ. ಪರಿಶಿಷ್ಟ ಜಾತಿಯ ಇತರೆ ಅಲೆಮಾರಿ ಸಮುದಾಯಗಳೂ ಕೂಡ ರಾಜ್ಯ ಸರ್ಕಾರದ ಒಳಮೀಸಲಾತಿ ವರ್ಗೀಕರಣಕ್ಕೆ ಸಂಬಂಧಪಟ್ಟಂತೆ ಅಸಮಾಧಾನ ಇದೆ.

ಈ ವಿಷಯವಾಗಿ ಸಾಕಷ್ಟು ಪ್ರತಿಭಟನೆಗಳಾಗಿವೆ. ಎಡಗೈ ಸಮುದಾಯ ಒಳ ಮೀಸಲಾತಿ ಯಥಾವತ್ತು ಜಾರಿಯಾಗಬೇಕೆಂದು ಪಟ್ಟು ಹಿಡಿದಿದ್ದರೆ, ಬಲಗೈ ಸೇರಿದಂತೆ ಇತರ ಸಮುದಾಯಗಳು ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ವರದಿ ತಿರಸ್ಕರಿಸುವಂತೆ ಒತ್ತಾಯಿಸುತ್ತಿವೆ. ಕಾಂಗ್ರೆಸ್ ಪಕ್ಷ ವಿಧಾನಸಭೆ ಚುನಾವಣೆಗೂ ಮುನ್ನ ಚಿತ್ರದುರ್ಗದಲ್ಲಿ ಸಮಾವೇಶ ನಡೆಸಿ, ಒಳಮೀಸಲಾತಿ ಜಾರಿಗೊಳಿಸುವುದಾಗಿ ಪ್ರಕಟಿಸಿತ್ತು. ಅದಕ್ಕೆ ಪೂರಕವಾಗಿ ಸುಪ್ರೀಂಕೋರ್ಟ್ ಆದೇಶವು ದೊರೆತ್ತಿದ್ದರಿಂದಾಗಿ ಒಳಮೀಸಲಾತಿ ಪ್ರಕ್ರಿಯೆಗಳಿಗೆ ಚಾಲನೆ ನೀಡಲಾಯಿತು. ಸಚಿವ ಸಂಪುಟದಲ್ಲಿ ಹಲವು ಸುತ್ತಿನ ಚರ್ಚೆಗಳ ಬಳಿಕ ಒಳಮೀಸಲಾತಿ ಜಾರಿಗೊಳಿಸುವ ನಿರ್ಣಯವನ್ನು ಕೈಗೊಳ್ಳಲಾಗಿತ್ತು.

ಆದರೆ ಅದರಲ್ಲಿ ನಿಗದಿ ಪಡಿಸಿದ್ದ ರೋಸ್ಟರ್ ಬಿಂದುಗಳು ಗೊಂದಲಕಾರಿಯಾಗಿದ್ದವು. ಇದರಿಂದಾಗಿ ಪರಿಶಿಷ್ಟ ಜಾತಿಯ ಕೆಲ ಸಮುದಾಯಗಳು ಬೀದಿಗಿಳಿದಿದ್ದವು. ಒಳಮೀಸಲಾತಿ ಇತ್ಯರ್ಥವಾಗದೇ ಇದ್ದಿದ್ದರಿಂದ ಸರ್ಕಾರದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಕಳೆದ 3 ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿದೆ. ಯುವ ಸಮುದಾಯ ಸರ್ಕಾರದ ವಿರುದ್ಧ ಬೀದಿಗಿಳಿದು ಪ್ರತಿಭಟಿಸುತ್ತಿದೆ. ನೇಮಕಾತಿ ಪ್ರಕ್ರಿಯೆಗಳಿಗೆ ಚಾಲನೆ ನೀಡದೇ ಇದ್ದರೆ, ಯುವ ಸಮುದಾಯದ ಆಕ್ರೋಶ ಮತ್ತಷ್ಟು ತೀವ್ರಗೊಳ್ಳುವ ಆತಂಕ ಇದೆ. ಈ ಹಿನ್ನೆಲೆಯಲ್ಲಿ ಒಳಮೀಸಲಾತಿ ಗೊಂದಲಗಳನ್ನು ಇತ್ಯರ್ಥಪಡಿಸಲು ರಾಜ್ಯ ಸರ್ಕಾರ ಮತ್ತೊಂದು ಸುತ್ತಿನ ಪ್ರಯತ್ನಗಳನ್ನು ಆರಂಭಿಸಿವೆ. ರೋಸ್ಟರ್ ಬಿಂದುವಿನ ಗೊಂದಲಗಳನ್ನು ಸರಿಪಡಿಸಲು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚಿಸಲಾಗಿದೆ. ಸಮಿತಿ ಒಂದು ವಾರದೊಳಗಾಗಿ ವರದಿ ನೀಡಬೇಕಿತ್ತು. ಈ ಹಿನ್ನೆಲೆಯಲ್ಲಿ ವಿಶೇಷ ಸಚಿವ ಸಂಪುಟ ಸಭೆಯನ್ನು ಕರೆಯಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

## ಚಿಕ್ಕಕಡಬೂರು:14 ಜೋಡಿಗಳ ಸಾಮೂಹಿಕ ವಿವಾಹ ಹಾಗೂ ಉಚ್ಚಾಯ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಮಸ್ಕಿ:** ತಾಲೂಕಿನ ಚಿಕ್ಕ ಕಡಬೂರು ಗ್ರಾಮದಲ್ಲಿ ಶ್ರೀ ಆದಿ ಬಸವೇಶ್ವರ ಜಾತ್ರಾ ಅಂಗವಾಗಿ ಬೆಳಗಿಂದಲೇ ದೇವರಿಗೆ ವಿವಿಧ ಪೂಜಾ ವಿಧಿ ವಿಧಾನಗಳು ನಡೆದವು. ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ವೇದಿಕೆಯಲ್ಲಿ 14 ಜೋಡಿಗಳ ಸಾಮೂಹಿಕ ವಿವಾಹ ಅದ್ದೂರಿಯಾಗಿ ನಡೆಯಿತು.



ಜಾತ್ರೆಗೆ ಬಂದಂತ ಸಾವಿರಾರು ಭಕ್ತರಿಗೆ ಪ್ರಸಾದ ವ್ಯವಸ್ಥೆ ಜರಗಿ ಹಾಗೂ ಸಾಯಂಕಾಲ ಐದು ಗಂಟೆಗೆ ಉಚ್ಚಾಯ ರಥೋತ್ಸವ ಅದ್ದೂರಿಯಾಗಿ ಜರುಗಿತು .ಈ ಮಹಾರಾತೋತ್ಸವದಲ್ಲಿ ವಿವಿಧ ಮಠದ ಮಠಾಧೀಶರು ಹಾಗೂ ಜನಪ್ರತಿನಿಧಿಗಳು ಸಾಕ್ಷಿಯಾದರು . ಜಿಲ್ಲೆಯ ಭಕ್ತರು ಹಾಗೂ ಚಿಕ್ಕಕಡಬೂರು ಗ್ರಾಮದ ಸುತ್ತ ಮುತ್ತಲಿನ ವಿವಿಧ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಚಿಕ್ಕಕಡಬೂರಿನ ಶ್ರೀ ಆದಿ ಬಸವೇಶ್ವರ ದೇವರ ಕೃಪೆಗೆ ಪಾತ್ರರಾದರು.

# ಕಾರುಣ್ಯ ಆಶ್ರಮದಲ್ಲಿ ಬಸವ ಜಯಂತಿ ಆಚರಣೆ



ನೈಜ್ಯ ದೆಸೆ ನ್ಯೂಸ್

**ಸಿಂಧನೂರು:** ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಹಾಗೂ 2024ನೇ ವರ್ಷದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಆಶ್ರಯದಾತರುಗಳು ವಿಶೇಷ ಪೂಜೆಯನ್ನು ಸಲ್ಲಿಸಿದರು. ನಂತರ ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ ಮಾತನಾಡಿ ಬಸವಣ್ಣನವರ ಆದರ್ಶ ವ್ಯಕ್ತಿತ್ವ ಹಾಗೂ ಮಾರ್ಗದರ್ಶನಗಳೇ ನಮ್ಮ ಈ ಸೇವೆಗೆ ಮೂಲ ಕಾರಣ ಬಸವಣ್ಣನವರ ಸಮಾನತೆಯ ಹಾದಿಯಲ್ಲಿ ನೊಂದವರ ಅನಾಥರ ರಕ್ಷಣೆಯೇ ನಮ್ಮ ಮೂಲ ಉದ್ದೇಶವಾಗಿದೆ. ಕಾಯಕವೇ ಕೈಲಾಸ ಎಂದು ಹೇಳಿದ ಬಸವಣ್ಣನವರ ಸಂದೇಶವನ್ನು ನಾವು ನಿರಂತರ ಜೋಳಿಗೆಯ ಕಾಯಕದೊಂದಿಗೆ ಕಾರುಣ್ಯ ಕುಟುಂಬದ ಬದುಕನ್ನು ಸಾಗಿಸುತ್ತಿದ್ದೇವೆ.

ಎಲ್ಲಾ ಕಾರ್ಯಗಳಿಗೆ ಆಶ್ರಮಕ್ಕೆ ಸಹಾಯ ಸಹಕಾರ ಮಾಡುವ ದಾನಿಗಳೇ ನಮಗೆ ದೇವರುಗಳಾಗಿ ನಮ್ಮ ಹಸಿವನ್ನು ನೀಗಿಸುತ್ತಿದ್ದಾರೆ. ಇಂತಹ ಪುಣ್ಯ ಸೇವಾ ಕಾರ್ಯಗಳಿಗೆ ಸಿಂಧನೂರಿನ ಶಾಸಕರುಗಳಿಬ್ಬರು ಆಸರಕ್ಕೆ ಸ್ವಂತ ಜಾಗ ಹಾಗೂ ಅನುದಾನ ಕಲ್ಪಿಸಿದಲ್ಲಿ ಇನ್ನೂ ಹೆಚ್ಚಿನ ಸೇವೆಯನ್ನು ಮಾಡಲು ನಮಗೆ ಅನುಕೂಲವಾಗುತ್ತದೆ ಎಂದು ಮಾತನಾಡಿ ಸಮಸ್ತ ಜನತೆಗೆ ಬಸವ ಜಯಂತಿಯ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ.ಮೀನಾಕ್ಷಮ್ಮ. ಲಕ್ಷ್ಮಿ. ಹಾಗೂ ಆಶ್ರಮದ ಎಲ್ಲಾ ಆಶ್ರಯದಾತರುಗಳು ಭಾಗವಹಿಸಿದ್ದರು.

## ಕಾಯಕ, ದಾಸೋಹ, ಸಮಾನತೆ ಹರಿಕಾರರು ಶ್ರೀ ಬಸವೇಶ್ವರರು: ಮರಿಗೌಡ ಮಾ.ಪಾ

ನೈಜ್ಯ ದೆಸೆ ನ್ಯೂಸ್




**ಹಾಲಾಪೂರ:** ಗ್ರಾಮದಲ್ಲಿರುವ ಅರವಿಂದ ಘೋಷ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವಜ್ಯೋತಿ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಪೂಜಾ ಕಾರ್ಯಕ್ರಮ ನಡೆಯಿತು.

ನಂತರ ಮಾತನಾಡಿದ ಸಂಸ್ಥೆಯ ಅಧ್ಯಕ್ಷರಾದ ಮರಿಗೌಡ ಮಾ.ಪಾ ಶ್ರೀ ಬಸವೇಶ್ವರ ಇಡೀ ವಿಶ್ವಕ್ಕೆ ಸಮಾನತೆಯನ್ನು ಪ್ರತಿಪಾದಿಸಿದ ಶ್ರೇಷ್ಠ ಪುರುಷರು, ಹನ್ನೆರಡನೇ ಶತಮಾನ ಭಾರತದ ದಾರ್ಶನಿಕ, ಸಮಾಜ ಸುಧಾರಕ, ಲಿಂಗಾಯತ ಧರ್ಮದ ಪ್ರವರ್ತಕ ಅವರು ಕರ್ನಾಟಕ ಇತಿಹಾಸದಲ್ಲಿ ಸಮಾನತೆಯನ್ನು ಎತ್ತಿ ತೋರಿಸಿದ ಆದರ್ಶ ಪ್ರಾಯರು ಶ್ರೀ ಬಸವೇಶ್ವರರು ಎಂದು ಹೇಳಿದರು. ಈ ವೇಳೆಯಲ್ಲಿ ಕರಿಯಪ್ಪ ಹಿರೇಕುರುಬರು, ಚನ್ನಬಸವ ಗ್ಯಾರೆಂಟಿ ಸಮಿತಿ ಸದಸ್ಯರು, ಶ್ರೀಕಾಂತ ಉಪನ್ಯಾಸಕರು, ಬಸನಗೌಡ ಕತೆಗಲ್, ದುರಗೇಶ ನಾಯಕ ಇನ್ನಿತರರು ಇದ್ದರು.

## ಜಾತ್ರೆಯಲ್ಲಿ ಆಕಸ್ಮಿಕ ಬೆಂಕಿ, ಆಟೋ, ಒಂದು ಲಕ್ಷ ರೂ ಮೊತ್ತದ ಆಟಿಕೆ ಸಾಮಾನು ಭಸ್ಮ

ನೈಜ್ಯ ದೆಸೆ ನ್ಯೂಸ್



**ಮಸ್ಕಿ:** ತಾಲೂಕಿನ ಚಿಕ್ಕ ಕಡಬೂರು ಗ್ರಾಮದಲ್ಲಿ ಇಂದು ಗ್ರಾಮದ ಆರಾಧ್ಯದೈವ ಶ್ರೀ ಆದಿ ಬಸವೇಶ್ವರ ಜಾತ್ರೆ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಹದಿನಾಲ್ಕು ಜೋಡಿಗಳ ಸಾಮೂಹಿಕ ವಿವಾಹ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಆದರೆ ದುರಂತವೆಂದರೆ ಮಧ್ಯಾಹ್ನದ ವೇಳೆಯಲ್ಲಿ ಅತಿ ಬಿಸಿಲಿನ ತಾಪಮಾನ ಏರಿಕೆ ಒಂದು ಕಡೆಯಾದರೆ ಇನ್ನೊಂದು ಕಡೆ ಕಿಡಿಗೇಡಿಗಳು ಬಿಡಿ ಸೇದಿ ಹಾಗೆ ಒಕ್ಕಟ್ಟಿದ್ದರಿಂದ ಅದರ ಕಿಡಿಯಿಂದ ಹುಲ್ಲಿನ ಮೇವಿಗೆ ಬೆಂಕಿ ತಾಗಿ ಪಕ್ಕದಲ್ಲಿ ಜಾತ್ರೆಗೆ ದೂರದ ಹುಲಿಹೈದರ್ ನಿಂದು ಆಟಿಕೆ ಸಾಮಾನ ಮಾರಲು ಬಂದಿದ್ದ ಲಕ್ಷ್ಮಿ ಚನ್ನದಾಸರ ಮಹಿಳೆ ಆಟೋ ಹಾಗೂ ಅಟಿಕೆ ಸಾಮಾನು ಬೆಂಕಿ ತಗೋಳಿ ಒಂದು ಲಕ್ಷ ರೂಪಾಯಿ ಮೊತ್ತದ ಸಾಮಾನುಗಳು ಸುಟ್ಟಿವೆ ಎಂದು ಲಕ್ಷ್ಮಿ ಹುಲಿ ಐದರ್ ಅಳುತ್ತಾ ಬಹಳ ನೋವಿನಿಂದ ತಮ್ಮ ಅಳಲನ್ನು ಹಂಚಿಕೊಂಡಿದ್ದು ಮನ ಕಲಕವಂತಿತ್ತು, ಮುಂದೆ ನಮ್ಮ ಗತಿ ಏನು ಯಾರು ಪರಿಹಾರ ಕೊಡುತ್ತಾರೆ ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ನೋವು ಹಂಚಿಕೊಂಡ್ರು.

# ಅದ್ದೂರಿಯಾಗಿ ತಾಲೂಕು ಆಡಳಿತದಿಂದ ಬಸವ ಜಯಂತಿ ಕಾರ್ಯಕ್ರಮ ಆಚರಣೆ

ನೈಜ್ಯ ದೆಸೆ ನ್ಯೂಸ್



**ಮಾನ್ವಿ:** ಪಟ್ಟಣದ ಬಸವ ವೃತ್ತದಲ್ಲಿ ತಾಲೂಕು ಆಡಳಿತದಿಂದ ಹಮ್ಮಿಕೊಂಡ ಬಸವ ಜಯಂತಿ ಕಾರ್ಯಕ್ರಮ ಅಂಗವಾಗಿ ಶ್ರೀ ವಿಶ್ವಗುರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸುವ ಮೂಲಕ ಬಸವೇಶ್ವರರ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ 12 ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪವನ್ನು ಕಟ್ಟುವ ಮೂಲಕ ವಿಶ್ವಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪರಿಚಯಿಸಿದರು.

ಸಮಾಜದಲ್ಲಿನ ಎಲ್ಲಾ ಕಾಯಕ ಶರಣರನ್ನು ಅನುಭವ ಮಂಟಪದ ಮೂಲಕ ಒಂದುಗೂಡಿಸಿ ಕಾಯಕ,ಜಂಗಮ ,ದಾಸೋಹದ ಮೂಲಕ ಕಲ್ಯಾಣ ರಾಜ್ಯದ ಪರಿಕಲ್ಪನೆಯನ್ನು ನಮ್ಮಗೆ ನೀಡಿದ್ದಾರೆ. ಬಸವಾದಿ ಶರರಣರ ಅನುಭವದ ಮೂಲಕ ಮೂಡಿದ ವಚನಗಳನ್ನು ನಾವು ಅಧ್ಯಾಯನವನ್ನು ಮಾಡಿ ವಚನಗಳಲ್ಲಿನ ಶರಣತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದು ತಿಳಿಸಿದರು.

ತಹಶೀಲ್ದಾರ್ ಕಚೇರಿ ಆವರಣದಲ್ಲಿನ ವೇದಿಕೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್ ಮಾತನಾಡಿ 12 ನೇ ಶತಮಾನದಲ್ಲಿ ಬಸವಣ್ಣನವರು ಸಮಾಜದಲ್ಲಿ ಅನೇಕ ಸುಧಾರಣೆಗಳನ್ನು ತಂದ ಮಹಾನ್ ಸಮಾಜ ಸುಧರಕಾರಾಗಿದ್ದಾರೆ. ಸಮಾಜದಲ್ಲಿ ಸ್ತ್ರೀಯರಿಗೆ ಸಮಾನತೆಯನ್ನು ಕಲ್ಪಿಸುವ ಮೂಲಕ ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು ಕಲ್ಪಿಸಿದ್ದರು.

ಬಸವಣ್ಣನವರು ಸಮಾಜದ ಅನೇಕ ಮೌಢ್ಯಚಾರಣೆಗಳನ್ನು ಖಂಡಿಸಿದರು. ತಮ್ಮ ವಚನಗಳ ಮೂಲಕ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಿದರು. ಸತ್ಯಶುದ್ಧವಾದ ಕಾಯಕದ ಮೂಲಕ ಬಂದ ಹಣವನ್ನು ದಾಸೋಹಕ್ಕಾಗಿ ವಿನಿಯೋಗಿಸುವಂತೆ ಪ್ರತಿಪಾದಿಸಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲ ನಡೆಯೋಣ ಎಂದು ತಿಳಿಸಿದರು. ಶರಣಯ್ಯ ಹಿರೇಮಠ ಚೀಕಲಪರ್ವಿ ಶಿಕ್ಷಕರಿಂದ ಬಸವಣ್ಣನವರ ಜೀವನ ಹಾಗೂ ತತ್ವಗಳ ಬಗ್ಗೆ ಉಪನ್ಯಾಸ ನೀಡಿದರು. ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ತೋರಿದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಪಟ್ಟಣದ ಬಸವವೃತ್ತದಿಂದ ತಹಶೀಲ್ದಾರ್ ಕಚೇರಿಯವರೆಗೆ ಶ್ರೀ ವಿಶ್ವಗುರು ಬಸವೇಶ್ವರರ ಭಾವಚಿತ್ರ ಮೆರವಣಿಗೆ ನಡೆಸಲಾಯಿತು.

ಕಾರ್ಯುಕ್ರಮದಲ್ಲಿ ಮಾಜಿ ಶಾಸಕರಾದ ರಾಜಾ ವೆಂಕಟಪ್ಪನಾಯಕ ,ಪಿ.ಐ, ಸೋಮಶೇಖರ ಎಸ್.ಕೆಂಚರೆಡ್ಡಿ,ತಾ.ಆರೋಗ್ಯಧಿಕಾರಿ ಡಾ.ಶರಣಬಸವರಾಜ, ಬಿ.ಸಿ,ಎಂ, ಇಲಾಖೆಯ ಅಧಿಕಾರಿ ಭಾಗಯ್ಯನಾಯಕ.ಅರಣ್ಯ ಇಲಾಖೆಯ ಉಮಕಾಂತ,ಸರಕಾರಿ ನೌಕರರ ತಾ.ಅಧ್ಯಕ್ಷರಾದ ಸುರೇಶಕುರ್ಡಿ, ಸಾರಿಗೆ ಇಲಾಖೆಯ ವ್ಯವಸ್ಥಾಪಕರಾದ ನಾಗರಾಜ , ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ತಾ.ಬಸವ ಕೇಂದ್ರದ ಅಧ್ಯಕ್ಷರಾದ ಶರಣಬಸವ ಬೆಟ್ಟದೂರು.ಗೌರವಾಧ್ಯಕ್ಷರಾದ ಡಾ.ಬಸವಪ್ರಭುಪಾಟೀಲ್ ಬೆಟ್ಟದೂರು, ತಾಲೂಕು ವೀರಶೈವ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್,ಗೌರವಧ್ಯಕ್ಷರಾದ ಶ್ರೀಧರಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಅರುಣಚಂದಾ, ರಾಜ್ಯ ಕಾರ್ಯಕಾರಣಿ ಸದಸ್ಯರಾದ ಸಿದ್ದಲಿಂಗಪ್ಪ ವಕೀಲರು. ಗುಮ್ಮ ಬಸವರಾಜ, ವೀರನಗೌಡ ವಕೀಲರು,ಹೆಚ್. ಮೌನೇಶಗೌಡ,ಆಂಜನೇಯ ನಸಲಾಪುರ ಅಧ್ಯಕ್ಷರು ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘ ಮಾನ್ವಿ,ಶರಣಪ್ಪಮೇದಾ ,ಜೆ.ಸುಧಕಾರ್, ದೊರಬಾಬು ಸೇರಿದಂತೆ ಇನ್ನಿತರರು ಇದ್ದರು.

## ಸಾಹಿತ್ಯ ಸಿಂಚನ

ಅವಸರ ಮಾಡಿರುವೆ ಅಣ್ಣ! ಅವಸರ ಮಾಡಿರುವೆ....
ಉತ್ತಲು ಬಿತ್ತಲು ಕಾಲದ ಮುಂಗಾರು ಸಾಗಲಿಲ್ಲ!
ಮನಸ್ಸುಗಳು ಹದ ವಾಗಲಿಲ್ಲ! ಹನಿ ಜಿನಿಯಲಿಲ್ಲ!
ಅವಸರ ಮಾಡಿರುವೆ ಅಣ್ಣ!ಅವಸರ ಮಾಡಿರುವೆ ....

ಸಹ ಪಂಕ್ತಿಗೆ ಸಹಮತ ತಂದಿರುವೆ! ಆದರೆ ಸಹಬಾಳ್ವೆಗೆ
ಜನ ಮಾನಸ ಮುದಗೊಳ್ಳಲು ಕಾಯದೆ ಯಾಕೋ,
ಅವಸರ ಮಾಡಿರುವೆ ಅಣ್ಣ! ಅವಸರ ಮಾಡಿರುವೆ.....

ನೀನಿಲ್ಲದೆ ಒಂಬೈನೂರು ವರ್ಷ! ನಮ್ಮವಸ್ಥೆಗೆ ಸಾವಿರ
ಸಾವಿರ ವರ್ಷ...
ನಾವಲ್ಲೇ ಇನ್ನೂ ... ವೈಷಮ್ಯಗಳ ಸರ್ಪದ ನೆರಳಲ್ಲಿ! ನಿನ್ನ
ಬರುವಿಕೆಗಾಗಿ ಕಾಯುವ ನಮ್ಮ ಅಸಹಾಯಕ ಸ್ಥಿತಿಯಲ್ಲಿ!
ಅವಸರ ಮಾಡಿರುವೆ ಅಣ್ಣ! ಅವಸರ ಮಾಡಿರುವೆ.....

ನರೇಂದ್ರ ನಾಥ್ ವೈ...

## ಮಹಿಳಾ ಮೀಸಲಾತಿ ಸೋಲು ದ್ರೌಪದಿ ವಸ್ತ್ರಾಪಹರಣಕ್ಕೆ ಸಮ; ಯೋಗಿ ಆದಿತ್ಯನಾಥ್

ನ್ಯಾಜ್ಯ ದೆಸೆ ನ್ಯೂಸ್

ಲಕ್ನೋ: ಮಹಿಳಾ ಮೀಸಲಾತಿ ಮಸೂದೆಗೆ ಸೋಲಾಗಿರುವುದು ಮಹಾಭಾರತದ ದ್ರೌಪದಿ ವಸ್ತ್ರಾಪಹರಣಕ್ಕೆ ಸಮ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿಪಕ್ಷಗಳ ವಿರುದ್ಧ ಕಿಡಿಕಾರಿದ್ದಾರೆ. ಸಂಸತ್‌ನಲ್ಲಿ ಕಾಂಗ್ರೆಸ್, ಎಸ್‌ಪಿ, ಟಿಎಂಸಿ ಮತ್ತು ಡಿಎಂಕೆ ವರ್ತಿಸಿದ ರೀತಿಯು ದ್ರೌಪದಿಯ ವಸ್ತ್ರಾಪಹರಣ ದೃಶ್ಯದಂತಿತ್ತು. ವಿರೋಧ ಪಕ್ಷದ ನಾಯಕರು ಮಾಡಿದ ಬೇಜವಾಬ್ದಾರಿ ಹೇಳಿಕೆಗಳು, ಅವರು ಪ್ರದರ್ಶಿಸಿದ ನಡವಳಿಕೆ ಎಲ್ಲರಿಗೂ ತಿಳಿದಿದೆ ಎಂದು ಅವರು ಆರೋಪಿಸಿದ್ದಾರೆ.



ಮುಸ್ಲಿಂ ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿ ಬೇಡಿಕೆಯ ಬಗ್ಗೆ ಸಮಾಜವಾದಿ ಪಕ್ಷದ ನಿಲುವಿನ ಬಗ್ಗೆ ಮಾತನಾಡಿದ ಆದಿತ್ಯನಾಥ್, ಮಹಿಳಾ ಸಬಲೀಕರಣದ ಗುರಿಯನ್ನು ಹೊಂದಿರುವ ಶಾಸನದ ಬಗ್ಗೆ ಅಪ್ರಸ್ತುತ ವಿಷಯಗಳನ್ನು ಎತ್ತುವ ಪ್ರಯತ್ನಗಳು ನಡೆಯುತ್ತಿವೆ ಎಂದಿದ್ದಾರೆ. ಸಮಾಜವಾದಿಗಳು ಸಂವಿಧಾನವನ್ನು ಪ್ರಾರ್ಥಿಸುತ್ತಾರೆ. ಆದರೆ, ಡಾ. ಬಿ.ಆರ್.ಅಂಬೇಡ್ಕರ್ ಅವರ ಮನೋಭಾವಕ್ಕೆ ವಿರುದ್ಧವಾಗಿ ವರ್ತಿಸುತ್ತಾರೆ ಎಂದು ಕುಟುಕಿದ್ದಾರೆ. ಮಹಿಳಾ ಮೀಸಲಾತಿ ಮಸೂದೆಯು ಪ್ರಗತಿಪರ ಹೆಜ್ಜೆಯಾಗಿದ್ದು, ಅದು ಯಾರ ಹಕ್ಕುಗಳನ್ನು ಕಸಿದುಕೊಳ್ಳಲಿಲ್ಲ. ಆಡಳಿತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿತು ಎಂದು ಅವರು ಹೇಳಿದ್ದಾರೆ.ಮಹಿಳಾ ವಿರೋಧಿಗಳಿಗೆ ಮುಂದಿನ ಚುನಾವಣೆಗಳಲ್ಲಿ ನಾಡಿನ ಮಹಿಳೆಯರೇ ತಕ್ಕ ಉತ್ತರ ನೀಡಲಿದ್ಧಾರೆ ಎಂದು ಅವರು ಎಚ್ಚರಿಸಿದ್ದಾರೆ.

## ಸಾಹಿತಿ ಶ್ರೀಕಾಂತ ಪತ್ತಾರಗೆ ಸನ್ಮಾನ

ನ್ಯಾಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ಸೋಮವಾರ ಜರುಗಿದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಜೆ ಎಸ್ ಜಿ ಫೌಂಡೇಶನ್ ಅಧ್ಯಕ್ಷ, ಸಾಹಿತಿ ಶ್ರೀಕಾಂತ ಪತ್ತಾರ ಇವರನ್ನು ತಾಲೂಕ ಆಡಳಿತದ ವತಿಯಿಂದ ಗೌರವ ಸಮರ್ಪಣೆ ಸಲ್ಲಿಸಲಾಯಿತು.



ತಹಸಿಲ್ದಾರ್ ಗ್ರೇಡ್ -2 ಪ್ರದೀಪ ದೇವಗಿ-ರಿ,ತಾಪಂ ಇಒ ಅನಸೂಯಾ ಚಲವಾದಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ,ಪಿಎಸ್‌ಐ ಜ್ಯೋತಿ ಖೋತ, ಸಂಗಮೇಶ ದೇಸಾಯಿ ಹಾಗೂ ಎಂ ಎಸ್ ಸರಶೆಟ್ಟಿ ಇದ್ದರು.

ನ್ಯಾಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕರಡಿಗುಡ್ಡದಲ್ಲಿ 65 ಲಕ್ಷ ವೆಚ್ಚದ ಆಸ್ಪತ್ರೆ ಕಟ್ಟಡಕ್ಕೆ ಭೂಮಿ ಪೂಜೆ

ನ್ಯಾಜ್ಯ ದೆಸೆ ನ್ಯೂಸ್





ಮಾನವಿ: ಮಾನ್ವಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ ಕರಡಿಗುಡ್ಡ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ನಿರ್ಮಾಣಗೊಳ್ಳಲಿರುವ ಸುಮಾರು 65 ಲಕ್ಷ ವೆಚ್ಚದ ನೂತನ ಆಸ್ಪತ್ರೆ ಕಟ್ಟಡ ಕಾಮಗಾ-ರಿಗೆ ಭೂಮಿ ಪೂಜೆ ಕಾರ್ಯಕ್ರಮವು ಜರುಗಿತು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರಾದ ಸನ್ಮಾನ್ಯ ಶ್ರೀ ಎನ್.ಎಸ್. ಬೋಸರಾಜು ಜೀ ಅವರು ಮತ್ತು ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರು ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಗ್ರಾಮೀಣ ಪ್ರದೇಶದ ಜನರಿಗೆ ಸಮೀಪದಲ್ಲೇ ಗುಣಮಟ್ಟದ ಆರೋಗ್ಯ ಸೇವೆ ದೊರಕುವಂತೆ ರಾಜ್ಯ ಸರ್ಕಾರ ವಿಶೇಷ ಯೋಜನೆಗಳನ್ನು ಜಾ-ರಿಗೊಳಿಸುತ್ತಿದೆ. ಆರೋಗ್ಯ ಸೌಲಭ್ಯಗಳ ಕೊರತೆ ನಿವಾರಣೆ ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಈ ಆಸ್ಪತ್ರೆ ನಿರ್ಮಾಣದಿಂದ ಕರಡಿಗುಡ್ಡ ಸೇ-ರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಉತ್ತಮ ಚಿಕಿತ್ಸೆ ಸಿಗಲಿದೆ ಎಂದು ಹೇಳಿದರು.

ಶಾಸಕ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಮಾತನಾಡಿ, ಕ್ಷೇತ್ರದ ಗ್ರಾಮೀಣ ಅಭಿವೃದ್ಧಿ ಹಾಗೂ ಆರೋಗ್ಯ ಸೇವೆಗಳ ವಿಸ್ತರಣೆಗೆ ನಿರಂತರ ಪ್ರಯತ್ನ ನಡೆಯುತ್ತಿದ್ದು, ಮಾನ್ವಿ ನಗರ ಹಾಗೂ ಪೋತ್ನಾಳ ಗ್ರಾಮದಲ್ಲಿಯೂ ಶೀಘ್ರದಲ್ಲೇ ನೂತನ ಆಸ್ಪತ್ರೆ ಕಟ್ಟಡಗಳಿಗೆ ಭೂಮಿ ಪೂಜೆ ನೆರವೇರಿಸಲಾಗುವುದು ಎಂದು ತಿಳಿಸಿದರು. ಈ ವೇಳೆ ಸಚಿವರು ಹಾಗೂ ಶಾಸಕರು ಗುತ್ತೇದಾರರು ಮತ್ತು ಅಧಿಕಾರಿಗಳಿಗೆ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದರ ಜೊತೆಗೆ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫುರ್ ಸಾಬ್, ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿ.ಕೆ. ಅಮರೇಶಪ್ಪ ವಕೀಲರು, ರಾಯಚೂರು ನಗರಸಭೆಯ ಮಾಜಿ ಸದಸ್ಯರಾದ ರುದ್ರಪ್ಪ ಅಂಗಡಿ, ಲಿಂಗಪ್ಪ ಕರಡಿಗುಡ್ಡ ಗುತ್ತೇದಾರರು, ಗೋಪಾಲ್ ನಾಯಕ್ ಕರಡಿಗುಡ್ಡ, ಸೈಯದ್ ಖಾಲಿದ್ ಖಾದ್ರಿ, ಚಾಂದ್ ಪಾಷಾ ಗುತ್ತೇದಾರರು, ಶಬುದ್ದೀನ್ ನಸಲಾಪುರ್, ಎಸ್. ಫಯಾಜುದ್ದೀನ್, ಸತ್ತಾರ್ ಬಂಗ್ಲೆವಲೇ, ರಸುಲ್ ಖುರೇಶಿ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಬಿ.ಗಣೇಕಲ್ ಗ್ರಾಮದಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಆಚರಣೆ



ನ್ಯಾಜ್ಯ ದೆಸೆ ನ್ಯೂಸ್

ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತಿಯನ್ನು ಭಕ್ತಿಭಾವದಿಂದ ಆಚ-ರಿಸಲಾಯಿತು. ಗ್ರಾಮದ ಈಶ್ವರ ದೇವಸ್ಥಾನದಲ್ಲಿ ಪಂಚಾಕ್ಷರಯ್ಯ ಸ್ವಾಮಿ ಮತ್ತು ವೀರಭದ್ರ ಸ್ವಾಮಿ ಅವರು ವಿಶೇಷ ಪೂಜೆ ನೆರವೇರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಬಸವಣ್ಣನವರು ಸಮಾನತೆ, ಕಾಯಕ ಮತ್ತು ದಾಸೋಹದ ಮಹತ್ವವನ್ನು ಸಾರಿದ ಮಹಾನ್ ತತ್ವಜ್ಞಾನಿಯಾಗಿದ್ದು, ಅವರ ಉಪದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಸ್ಮರಿಸಿದರು. ಗ್ರಾಮದ ಯುವಕರು ಮತ್ತು ಹಿರಿಯರು ಸೇರಿದಂತೆ ಎಲ್ಲಾ ವರ್ಗದ ಜನರು ಭಾಗವಹಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಶಾಂತಗುರು, ಮಹಾಂತಯ್ಯ ಸ್ವಾಮಿ, ವೀರೇಶ ಗೌಡ ಮಾಲೀ ಪಾಟೀಲ್, ಮಹೇಶ್ ಗೌಡ ಮಾಲೀ ಪಾಟೀಲ್, ಬಸವರಾಜ ದಳವಾಯಿ, ಟಿ.ಬಸವರಾಜ, ಸಿದ್ದಪ್ಪ ದೊರೆ, ಅಯ್ಯಣ್ಣ ಹೊಸಮನಿ, ಮಲ್ಲಯ್ಯ, ಆನಂದ ಸಾಹುಕಾರ, ಸಿದ್ದಪ್ಪ, ಗುಡದಯ್ಯ ದಳವಾಯಿ,

ಅಬ್ದುಲ್ ಹಮೀದ್, ಶಿವು ಮಂಡ್ಲಿ, ಚನ್ನಬಸವ ಪಿ.ಡಿ.ಓ., ಸದ್ದಾಂ ಹುಸೇನ್ ಶಿಕ್ಷಕರು, ಬಸವರಾಜ ಯಾದವ್, ಮುದುಕಣ್ಣ ಮಂಡ್ಲಿ, ಆಂಜನೇಯ್ಯ ದಳವಾಯಿ, ಆಂಜನೇಯ್ಯ, ಅಬಕಾರಿ, ಎಚ್.ಎಸ್.ನಾಯಕ, ವೀರೇಶ ಪಾಟೀಲ್, ಚನ್ನಪ್ಪ ಸೂಗೂರು, ಸೂಗಪ್ಪ, ಸುರೇಶ್ ಛಾವಣಿ, ಅರುಣ್ ಕುಮಾರ್ ಪಾಟೀಲ್, ಸುಧು ಅದ್ರಿ, ಮುದುಕಪ್ಪ, ಶಿವು ಕಲಮಲ್ ಮುಂತಾದವರು ಇದ್ದರು.

# ಅನಾಥ ನಿರ್ಗತಿಕ ಕುಟುಂಬಗಳಿಗೆ ನೆರವಿನ ಕಾರ್ಯ ನಿರಂತರ: ಅಶೋಕ ನಲ್ಲಾ

ನ್ಯಾಜ್ಯ ದೆಸೆ ನ್ಯೂಸ್



ನಗರದ ಕುಷ್ಟಗಿ ರಸ್ತೆಯ ಎಸ್.ಎಲ್.ವಿ ಹೊಟೇಲ್ ಹಿಂದುಗಡೆ ಇರುವ ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ (ರಿ) ಕಾರ್ಯಾಲಯವನ್ನು ಉದ್ಘಾಟಿಸಿ ನಂತರ ದಾನಿಗಳ ಸಹಕಾರದೊಂದಿಗೆ ಅನಾಥ ನಿರ್ಗತಿಕ ಕುಟುಂಬಕ್ಕೆ ಎರಡು ತಿಂಗಳಿಗೆ ಆಗುವಷ್ಟು ಕಿರಾಣಿ ಹಾಗೂ ಅಕ್ಕಿ ಪಾಕೆಟ್ ಲಿಂಗಸ್ಗೂರಿನ ರಾಮ್ ಬಾಬು ಹಾಗೂ ಚಂದ್ರಕಲಾ ಇವರ ಸಹಕಾರದಿಂದ ವಿತರಣೆ ಮಾಡಲಾಯಿತು.

ಇಬ್ಬರ ದಾನಿಗಳಿಗೆ ಸಂಸ್ಥೆ ವತಿಯಿಂದ ಅಭಿನಂದನೆ ಸಲ್ಲಿಸಿ, ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ಸಂಸ್ಥಾಪಕ ಕಾರ್ಯದರ್ಶಿ ಅಶೋಕ ನಲ್ಲಾ ಮಾತನಾಡಿ, ತಾಲೂಕಿನ ವಿವಿಧ ಗ್ರಾಮಗಳಲ್ಲಿ ಹಾಗೂ ನಗರದ ವಾರ್ಡ್ ಗಳಲ್ಲಿ ಯಾವುದೇ ಸಭೆ ಸಮಾರಂಭಗಳಲ್ಲಿ ಉಳಿದ ಆಹಾರ ವ್ಯಥ-ವಾಗುವುದನ್ನು ತಪ್ಪಿಸಲು ಉಳಿದ ಆಹಾರ ಶೇಖರಣೆ ಮಾಡಿ, ನಿರ್ಗತಿಕ ಮತ್ತು ಬಡ ಕುಟುಂಬಗಳಿಗೆ ವಿವಿಧೆಡೆ ಹಂಚುತಿದ್ದೇವೆ.

ಇದರ ಜೊತೆಗೆ ಬಡ ಕುಟುಂಬಗಳಿಗೆ ನೆರವು ನೀಡುವ ಮೂಲಕ ನಾವು ಸದಾ ಇಂತಹ ಕುಟುಂಬಗಳಿಗೆ ಬೆನ್ನೆಲುಬಾಗಿ ನಿಲ್ಲುತ್ತೇವೆ ಎಂದರು.

ಈ ಸಮಯದಲ್ಲಿ: ಕರಿಬಸವನಗರದ ರಂಭಾಪುರಿ ಶಾಖಾಮಠದ ಶ್ರೀ ಸೋಮನಾಥ ಶಿವಾಚಾರ್ಯ, ಸದಸ್ಯರಾದ ಖಾಜಾ ಹುಸೇನ, ರಾಜೇಶ ಹಾಗೂ ವನಸಿರಿ ಫೌಂಡೇಶನ್ ಅಧ್ಯಕ್ಷ ಅಮರೇಗೌಡ ಮಲ್ಲಾಪುರ, ಯುವ ಮುಖಂಡ ರುದ್ರಗೌಡ, ಬೂದೇಶ ಮರಾಠಿ, ಸೇರಿದಂತೆ ಅನೇಕರು ಭಾಗವಹಿಸಿದ್ದಾರು.

# ಕಾರುಣ್ಯಾಶ್ರಮದ ಸೇವೆ ಪ್ರೀತಿ ಸ್ನೇಹ ಸಂಬಂಧದ ಮಧುರ ಬಂಧನವಾಗಿದೆ :ಡಾ. ನಾಗರಾಜ ಕಾಟ್ವಾ

ನ್ಯಾಜ್ಯ ದೆಸೆ ನ್ಯೂಸ್



ಸಿಂಧನೂರು: ಸ್ಪರ್ಶ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಿಂಧನೂರು ವತಿಯಿಂದ ಸ್ತ್ರೀರೋಗ ತಜ್ಞರಾದ ಡಾ. ನಾಗರಾಜ ಕಾಟ್ವಾ ಅವರ ಜನ್ಮದಿನ ಸಮಾರಂಭ ಕಾರ್ಯಕ್ರಮವನ್ನು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ದಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಸರಳವಾಗಿ ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ವೈದ್ಯ ದಂಪತಿಗಳಾದ ಡಾ. ನಾಗರಾಜ ಕಾಟ್ವಾ ಹಾಗೂ ಡಾ. ಕೋನಿಕಾ ಕಾಟ್ವಾ ಇವರುಗಳನ್ನು ಸನ್ಮಾನಿಸಿ ಗೌರವಿಸಿ ಶುಭ ಹಾರೈಸಲಾಯಿತು. ಗೌರವ ಸ್ವೀಕರಿಸಿ ಡಾ. ನಾಗರಾಜ ಕಾಟ್ವಾ ಮಾತನಾಡಿ ಸಮಾಜದಿಂದ ತಿರಸ್ಕೃತಗೊಂಡವರಿಗಾಗಿ ಮತ್ತು ಕುಟುಂಬದ ಹಲವಾರು ಘಟನೆಗಳಿಂದ ನೊಂದವರ ಬಾಳಿಗೆ ಬದುಕು ಕಟ್ಟಿಕೊಟ್ಟಿರುವ ಈ ನಮ್ಮ ಕಾರುಣ್ಯ ಆಶ್ರಮವೂ ಕರುಣೆಯ ಮಂದಿರವಾಗಿದೆ. ಈ ಕಾರುಣ್ಯ ಆಶ್ರಮದಲ್ಲಿ ಆಶ್ರಯ ಪಡೆದಿರುವವರು ಶರಣ ಸ್ವರೂಪಿಗಳು ನಾವು ಸುಮಾರು ವರ್ಷಗಳಿಂದ ಕಾರುಣ್ಯ ಕುಟುಂಬದ ಸತ್ಯ ಸೇವೆಯನ್ನು ನೋಡುತ್ತಿದ್ದೇವೆ. ನಾವುಗಳು ಅದೆಷ್ಟೋ ಆಶ್ರಮಗಳನ್ನು ನೋಡಿದ್ದೇವೆ ಆದ-ರೆ ಈ ಕಾರುಣ್ಯ ಸಂಸ್ಥೆ ನಿರಂತರ ಸಮಾಜ ಪರ ಕಾರ್ಯಗಳನ್ನು ಮಾಡುವ ಮೂಲಕ ನಾಡಿನ ಜನರ ಪ್ರೀತಿಗೆ ಪಾತ್ರವಾಗಿದೆ. ಇಂತಹ ಒಂದು ಉತ್ತಮ ಸಂಸ್ಥೆ ನಮ್ಮ ಸಿಂಧನೂರಿನಲ್ಲಿರುವುದು ನಮ್ಮೆಲ್ಲರ ಪುಣ್ಯ ಕಾರುಣ್ಯಾಶ್ರಮದ ಸತ್ಯ ಸೇವೆಯೂ ಭಗವಂತನ ಪ್ರೀತಿಗೆ ಪಾತ್ರವಾಗಿದೆ. ಈ ಆಶ್ರಮದ ಸೇವೆ ಪ್ರೀತಿ ಸ್ನೇಹ ಸಂಬಂಧದ ಮಧುರ ಬಂಧನವಾಗಿದೆ. ಇಂತಹ ಪ್ರಾಮಾಣಿಕ ಸೇವೆಗೆ ನಮ್ಮ ಹಾಗೂ ನಮ್ಮ ಕುಟುಂಬದಿಂದ ಸಹಾಯ ಸಹಕಾರವಿರುತ್ತದೆ. ಈ ಆಶ್ರಮದ ಆಶ್ರಯದಾತ ದೇವರುಗಳ ಆಶೀರ್ವಾದ ಸದಾವಕಾಲ ನಮ್ಮೆಲ್ಲರ ಮೇಲಿರಲಿ ಎಂದು ಭಾವನಾತ್ಮಕವಾಗಿ ಮಾತನಾಡಿ ಆಶ್ರಮದ ಸೇವಾಕರ್ತ ದಂಪತಿಗಳಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮತ್ತು ಸುಜಾತ ಹಿರೇಮಠ ದಂಪತಿಗಳನ್ನು ಸನ್ಮಾನಿಸಿ ಗೌರವಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಕೋನಿಕಾ ಕಾಟ್ವಾ.ಸುಬ್ಬಾರಾವ್ ಹಾಗೂ ಆಶ್ರಮದ ಸಿಬ್ಬಂದಿಗಳಾದ ರಾಜು ಕಾಟ್ವಾ. ನಾಗರಾಜ ರಾಯಬಾಗಿ.

ದಿಲೀಪ್. ಜಗದೀಶ. ಅಮನ್. ರಸೂಲ್.ಸೋಮಣ್ಣ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ.ಜ್ಯೋತಿ. ಮೀನಾಕ್ಷಿಮ್ಮ. ಲಕ್ಷ್ಮೀ. ಹಾಗೂ ಆಸ್ಪತ್ರೆಯ ಹಲವಾರು ಸಿಬ್ಬಂದಿಗಳು ಭಾಗವಹಿಸಿದ್ದರು.

# ಸನ್ ರೈಸ್ ಕಾಲೇಜಿನಲ್ಲಿ ವಿಶ್ವಗುರು, ಕ್ರಾಂತಿಯೋಗಿ ಬಸವಣ್ಣನವರ ಜನ್ಮೋತ್ಸವದ ಸಂಭ್ರಮ

ನ್ಯಾಜ್ಯ ದೆಸೆ ನ್ಯೂಸ್



ಸಿಂಧನೂರು: ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜು, ಸಿಂಧನೂರಿನಲ್ಲಿ ಮಹಾನ್ ಸಮಾಜ ಸುಧಾರಕ ಬಸವಣ್ಣ ಅವರ ಜಯಂತಿಯನ್ನು ಭಕ್ತಿ ಭಾವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ಕಾರ್ಯದರ್ಶಿ ಇರ್ಷಾದ್ ಕೆ ಅವರು, ಬಸವಣ್ಣರ ಮಹತ್ವದ ತತ್ವಗಳನ್ನು ವಿವರಿಸಿ ಮಾತನಾಡಿದರು."ಕಾಯಕವೇ ಕೈಲಾಸ" ಎಂಬ ಬಸವಣ್ಣರ ಅಮೂಲ್ಯ ಸಂದೇಶವು ಕೇವಲ ಒಂದು ವಾಕ್ಯವಲ್ಲ, ಅದು ಜೀವನದ ದಿಕ್ಕನ್ನು ತೋರಿಸುವ ಮಹತ್ವದ ದರ್ಶನವಾಗಿದೆ.ಯಾವುದೇ ಕೆಲಸವನ್ನು ನಾವು ಪ್ರಾಮಾಣಿಕತೆಯಿಂದ, ಪರಿಶ್ರಮದಿಂದ ಮಾಡಿದರೆ ಅದೇ ಕೈಲಾಸ ಸಾಧನೆಯಾಗುತ್ತದೆ ಎಂಬುದನ್ನು ಬಸವಣ್ಣರು ತಮ್ಮ ಜೀವನದ ಮೂಲಕ ತೋರಿಸಿದ್ದಾರೆ ಎಂದು ಹೇಳಿದರು. ಸಮಾಜದಲ್ಲಿ ಅಸಮಾನತೆ, ಅಂಧಶ್ರದ್ಧೆ ಮತ್ತು ಅನ್ಯಾಯಗಳ ವಿರುದ್ಧ ಅವರು ಹೋರಾಡಿದ ರೀತಿ ಇಂದು ಕೂಡ ನಮಗೆ ಪ್ರೇರಣೆಯಾಗಿದೆ ಎಂದರು.

ಇನ್ನು ಮುಂದೆ ಮಾತನಾಡಿದ ಅವರು, ಬಸವಣ್ಣರು ಸಮಾನತೆ, ಸತ್ಯ ಮತ್ತು ಮಾನವೀಯತೆಯ ಪರವಾಗಿ ಬೋಧಿಸಿದ ಮೌಲ್ಯಗಳು ನಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದವು. ಜಾತಿ, ಧರ್ಮ, ವರ್ಗ ಎಂಬ ಭೇದಗಳನ್ನು ತೊರೆದು ಎಲ್ಲರೂ ಒಂದೇ ಮಾನವ ಕುಟುಂಬದ ಸದಸ್ಯರು ಎಂಬ ಭಾವನೆಯೊಂದಿಗೆ ಬದುಕಿದರೆ ಸಮಾಜದಲ್ಲಿ ಶಾಂತಿ ಮತ್ತು ಸಮೃದ್ಧಿ ನೆಲೆಸುತ್ತದೆ ಎಂದು ಅಭಿಪ್ರಾಯಪಟ್ಟರು.ಯುವಜನತೆ ಬಸವಣ್ಣರ ತತ್ವಗಳನ್ನು ಅರ್ಥಮಾಡಿಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯವೆಂದು ಹೇಳಿದರು.

ಉಪನ್ಯಾಸಕರಾದ ಆಶುಪಾಶ ಅವರು ಬಸವಣ್ಣರ ಜೀವನ ಮತ್ತು ಸಾಧನೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.ಬಸವಣ್ಣರು ಕೇವಲ ಧಾರ್ಮಿಕ ನಾಯಕನಷ್ಟೇ ಅಲ್ಲದೆ, ಮಹಾನ್ ಸಾಮಾಜಿಕ ಚಿಂತಕರಾಗಿದ್ದರು. ಅವರು ಅನುಭವ ಮಂಟಪದ ಮೂಲಕ ಸಮಾಜದಲ್ಲಿ ಸಂವಾದ ಮತ್ತು ಚಿಂತನೆಗೆ ವೇದಿಕೆ ಒದಗಿಸಿದರು. ಮಹಿಳೆಯ-ರಿಗೆ ಸಮಾನ ಹಕ್ಕುಗಳನ್ನು ನೀಡುವಲ್ಲಿ ಅವರು ತೆಗೆದುಕೊಂಡ ಹೆಜ್ಜೆಗಳು ಆ ಕಾಲದಲ್ಲಿ ಅತ್ಯಂತ ಪ್ರಗತಿಪರವಾಗಿದ್ದವು ಎಂದು ತಿಳಿಸಿದರು. ಬಸವಣ್ಣರ ವಚನಗಳು ಮಾನವೀಯ ಮೌಲ್ಯಗಳನ್ನು ಸಾರುವ ಅಮೂಲ್ಯ ಸಾಹಿತ್ಯವಾಗಿದ್ದು, ಇಂದಿಗೂ ಅವು ಜನಮನಗಳಲ್ಲಿ ಜೀವಂತವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಇಸಾಕ್, ಆಸಿಫ್, ಆಶುಪಾಶ, ಪುಟ್ಟರಾಜು, ಮಹಮ್ಮದ್, ಉಮಾ, ರೇಷ್ಮಾ, ಮೌಲಾಬಿ ಸೇರಿದಂತೆ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಎಲ್ಲರೂ ಬಸವಣ್ಣರ ತತ್ವಗಳನ್ನು ತಮ್ಮ ಜೀವನದಲ್ಲಿ

## ನೇಮಕಾತಿ ಪ್ರಕಟಣೆ

KVAFSU ನೇಮಕಾತಿ 2026–3 ಸಹಾಯಕ ಸಂಶೋಧನಾ ಅಧಿಕಾರಿ (ARO), ತಾಂತ್ರಿಕ ಸಹಾಯಕ ಹುದ್ದೆಗಳಿಗೆ ವಾಕ್–ಇನ್ ಸಂದರ್ಶನ ಏಪ್ರಿಲ್ 20, 2026 ಏಗಿಂಈಖಗ ನೇಮಕಾತಿ 2026: 3 ಸಹಾಯಕ ಸಂಶೋಧನಾ ಅಧಿಕಾರಿ (ARO), ತಾಂತ್ರಿಕ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾ–ರಿಕೆ ವಿಜ್ಞಾನ ವಿಶ್ವವಿದ್ಯಾಲಯವು ಏಪ್ರಿಲ್ 2026 ರ ಏಗಿಂಈಖಗ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಸಂಶೋಧನಾ ಅಧಿಕಾರಿ (ARO), ತಾಂತ್ರಿಕ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 28–ಏಪ್ರಿಲ್–2026 ರಂದು ವಾಕ್–ಇನ್–ಸಂದರ್ಶನಕ್ಕೆ ಹಾಜರಾಗಬಹುದು. ಕ್ಷೇತ್ರ ಕಾರ್ಯಕರ್ತ 28 ಏಪ್ರಿಲ್ 2026 (ವಾಕ್–ಇನ್) ತಾಂತ್ರಿಕ ಸಹಾಯಕ ಸಹಾಯಕ ಸಂಶೋಧನಾ ಅಧಿಕಾರಿ (ARO) 24 ಏಪ್ರಿಲ್ 2026 ಅಧಿಕೃತ ವೆಬ್‌ಸೈಟ್: kvafsu.edu.in

# ಬೀದಿ ಬದಿ ಝುಲ್ ಮುರಿ ಸವಿದ ಪ್ರಧಾನಿ ಮೋದಿ

ನೈಜ್ಯ ದೆಸೆ ನ್ಯೂಸ್

**ಝಾರ್‌ಗ್ರಾಮ್: ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆ ಬಿರುಸಿನ ಪ್ರಚಾರ ನಡೆಸಿದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸ್ಥಳೀಯರೊಂದಿಗೆ ಬೆರೆತು ಬೀದಿ ಬದಿಯಲ್ಲಿ ಝುಲ್ ಮುರಿ ತಿಂಡಿ ತಿಂದಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದೆ. ಬರ್ಜೋರಾ ಮತ್ತು ಬಲರಾಮ್‌ಪುರಗಳಲ್ಲಿ ಬೃಹತ್ ಸಮಾವೇಶಗಳನ್ನು ಉದ್ದೇಶಿಸಿ ಮಾತನಾಡಿದ್ದ ಪ್ರಧಾನಿ, ನಿನ್ನೆ ಮಧ್ಯಾಹ್ನದ ವೇಳೆಗೆ ಬುಡಕಟ್ಟು ಪ್ರಾಬಲ್ಯದ ಜಾರ್ಗ್ರಾಮ್ ತಲುಪಿದರು.**



ಅಲ್ಲಿನ ಸಮಾವೇಶದ ನಂತರ, ಹೆಲಿಪ್ಯಾಡ್ ಕಡೆಗೆ ಸಾಗುವ ದಾರಿಯಲ್ಲಿ ಪ್ರಧಾನಿಯವರು ಹಠಾತ್ ಆಗಿ ತಮ್ಮ ಬೆಂಗಾವಲು ಪಡೆಯನ್ನು ನಿಲ್ಲಿಸಲು ಸೂಚಿಸಿದರು. ಬಂಗಾಳಿ ರುಚಿಗೆ ಮನಸೋತ ಮೋದಿ ರಸ್ತೆಯ ಬದಿಯಲ್ಲಿ ಸ್ಥಳೀಯ ವ್ಯಾಪಾರಿಯೊಬ್ಬರು ಸಿದ್ಧಪಡಿಸುತ್ತಿದ್ದ ಬಂಗಾಳದ ಪ್ರಸಿದ್ಧ ತಿಂಡಿ ಝುಲ್ ಮುರಿ ಪ್ರಧಾನಿಯವರ ಗಮನ ಸೆಳೆಯಿತು. ಕಾರಿನಿಂದ ಇಳಿದ ಮೋದಿ ಅವರು ನೇರವಾಗಿ ವ್ಯಾಪಾ–ರಿಯ ಬಳಿಗೆ ತೆರಳಿ, ಅಲ್ಲಿಯೇ ತಯಾರಾದ ಬಿಸಿಬಿಸಿ ಮತ್ತು ಖಾರವಾದ ಝುಲ್ ಮುರಿಯನ್ನು ಸವಿದರು.ಕಡಲೆಕಾಯಿ, ಸಾಸಿವೆ ಎಣ್ಣೆ, ಈರುಳ್ಳಿ ಮತ್ತು ವಿಶೇಷ ಮಸಾಲೆಯಿಂದ ಕೂಡಿದ ಈ ತಿಂಡಿಯನ್ನು ಸವಿಯುತ್ತಾ, ಪ್ರಧಾನಿಯವರು ಸ್ಥಳೀಯ ಜನರೊಂದಿಗೆ ಕೆಲ ಕಾಲ ಮಾತನಾಡಿದರು.ದೇಶದ ಪ್ರಧಾನಿಯೇ ರಸ್ತೆ ಬದಿಯ ತಿಂಡಿಯನ್ನು ಸವಿಯುತ್ತಿರುವುದನ್ನು ಕಂಡ ಸ್ಥಳೀಯರು ಆಶ್ಚರ್ಯ ಮತ್ತು ಸಂತೋಷ ವ್ಯಕ್ತಪಡಿಸಿದರು. ಅನೇಕರು ಈ ಕ್ಷಣವನ್ನು ತಮ್ಮ ಮೊಬೈಲ್‌ಗಳಲ್ಲಿ ಸೆರೆಹಿಡಿದರು.ಈ ಕುರಿತು ಎಕ್?ಸನಲ್ಲಿ ಮಾಹಿತಿ ಹಂಚಿಕೊಂಡ ಪ್ರಧಾನಿ, ಬಂಗಾಳದ ರುಚಿ ಯಾವಾಗಲೂ ವಿಶಿಷ್ಟವಾದುದು. ಜಾರ್ಗ್ರಾಮ್‌ನ ಝುಲ್ ಮುರಿ ಅತ್ಯಂತ ಸ್ವಾದಿಷ್ಟವಾಗಿತ್ತು ಮತ್ತು ಇದು ನನ್ನ ಸುದೀರ್ಘ ದಿನದ ಪ್ರಚಾರಕ್ಕೆ ಹೊಸ ಚೈತನ್ಯ ನೀಡಿತು ಎಂದಿದ್ದಾರೆ. ಝಾರ್‌ಗ್ರಾಮ್ ಮತ್ತು ಸುತ್ತಮುತ್ತಲಿನ ಬುಡಕಟ್ಟು ಪ್ರದೇಶಗಳಲ್ಲಿ ಜನರೊಂದಿಗೆ ಭಾವನಾತ್ಮಕ ಸಂಬಂಧ ಬೆಳೆಸಲು ಪ್ರಧಾನಿಯವರ ಈ ಸರಳ ನಡವಳಿಕೆ ಸಹಾಯ ಮಾಡಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿನಲ್ಲಿ, ಬಂಗಾಳದ ರಾಜಕೀಯ ಸಮರದಲ್ಲಿ ಮೋದಿ ಸವಿದ ಝುಲ್ ಮುರಿ ಈಗ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಸಮಾಜಕ್ಕೆ ಬೆಳಕು ನೀಡಿದ ಸಮಾನತೆಯ ತತ್ವಪಾದಕ ಜಗಜ್ಯೋತಿ ಬಸವಣ್ಣ: ಮಹಾಲಿಂಗ ಸ್ವಾಮಿಗಳು.

ನೈಜ್ಯ ದೆಸೆ ನ್ಯೂಸ್

**ಇಡೀ ಜಗತ್ತಿಗೆ ಸಮಾನತೆಯ ತತ್ವಪಾದಕರಾದ ಕಾಯಕ ಯೋಗಿ ದಾಸೋಹ ತತ್ವಗಳ ಮೂಲಕ ಸಮಾಜಕ್ಕೆ ಬೆಳಕು ಚೆಲ್ಲಿದವರು ಈ ಜಗಜ್ಯೋತಿ ಬಸವೇಶ್ವರರು ಎಂದು ಯದ್ದಲದೊಡ್ಡಿ ಗ್ರಾಮದ ಮಹಾಲಿಂಗ ಸ್ವಾಮಿಗಳು ಹೇಳಿದರು. ಸಿಂಧನೂರು ನಗರದ ತಹಶೀಲ್ದಾರ್ ಕಚೇ–ರಿಯಲ್ಲಿ ತಾಲೂಕಾಡಳಿತದಿಂದ ಹಮ್ಮಿಕೊಂಡಿದ್ದ ಬಸವ ಜಯಂತೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಸವಣ್ಣನವರು ಹಾಕಿಕೊಟ್ಟ ಸನ್ಮಾರ್ಗದ ದಾ–ರಿಯಲ್ಲಿ ನಾವು–ನೀವು ಸಾಗೋಣ ಎಂದರು.**

ನಂತರ ಪ್ರವಚನಕಾರರಾಗಿ ಬಂದಂತಹ ಹಾವೇರಿ ಜಿಲ್ಲೆಯ ಡಾ.ಗುರುಲಿಂಗ ಸ್ವಾಮಿಗಳು ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ಹುಟ್ಟದೇ ಹೊಗಿದ್ದರೆ, ನಮ್ಮ ಬದುಕು ಇಂದಿಗೂ ಕತ್ತಲಾಗಿರುತ್ತಿತ್ತು ಬಸವಣ್ಣನವರ ಮಹಾನ್ ಕ್ರಾಂತಿಕಾರಕ ಹೋರಾಟದ ಫಲವಾಗಿ ಮಹಿಳೆಯ–ರಿಗೆ ಸ್ವಾತಂತ್ರ್ಯ, ದಲಿತರಿಗೆ ಸಮಾನತೆ




ಬಂದಿದೆ. ನಾವೆಲ್ಲರೂ ಒಂದೇ ಸಮಾನರು, ಜಾತಿ, ಮತ, ಪಂಥ, ಬೇಧ ಬಿಟ್ಟು ನಾವು ಒಂದುಗೂಡಿ ಬದುಕುವಂತೆ ಮಾಡಿದ್ದೆ, ವಿಶ್ವಗುರು ಬಸವಣ್ಣನವರು ಎಂದರು.

ತದನಂತರ ಬಸವ ಸರ್ಕಲ್ ನಲ್ಲಿರುವ ಪುತ್ಥಳಿ ಹತ್ತಿರ ಸಮಾಜದ ಮುಖಂಡರು ಹಾಗೂ ತಹಶೀಲ್ದಾರ್ ಸೇರಿದಂತೆ ಅನೇಕರು ಧ್ವಜಾರೋಹಣ ಮಾಡಿದರು. ಬಸವೇಶ್ವರರ ಪ್ರತಿಮೆಗೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡುವ ಮೂಲಕ ಬಸವ ಜಯಂತಿ ಆಚರಿಸಿದರು.

ಈ ಸಂದರ್ಭದಲ್ಲಿ: ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ, ತಾಲೂಕು ಪಂಚಾಯತಿ ಇಒ ಚಂದ್ರಶೇಖರ, ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ, ಶಾಸಕ ಹಂಪನಗೌಡ ಬಾದರ್ಲಿ, ಎಂ–ಎಲ್ಸಿ ಬಸನಗೌಡ ಬಾದರ್ಲಿ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರಾದ ಎಂ. ದೊಡ್ಡಬಸವರಾಜ, ವಿವಿಧ ಪಕ್ಷ ಹಾಗೂ ಸಂಘ ಸಂಸ್ಥೆಗಳ ಮುಖಂಡರಾದ ರಾಜಶೇಖರ ಪಾಟೀಲ್,



ಖಾಜಿ ಮಲ್ಲಿಕ್, ಡಾ.ಬಿ. ಎನ್ ಪಾಟೀಲ್, ಸಿದ್ರಾಮಪ್ಪ ಮಾಡಸಿರವಾರ, ಪಂಪಣ್ಣ ತಾವರಗೇರಾ, ಈರೇಶ ಇಲ್ಲೂರು, ವಕೀಲ ನೀರುಪಾದೆಪ್ಪ ಗುಡಿಹಾಳ, ಶರಣಪ್ಪ ತೆಂಗಿನಕಾಯಿ, ಅಶೋಕ ಉಮಲೂಟಿ, ಕರೇಗೌಡ ಕುರಕುಂದಿ, ಹೆಚ್. ಜಿ. ಹಂಪಣ್ಣ, ಕಾಶಿನಾಥ, ಈರಣ್ಣ, ಬೀಮಣ್ಣ ಹಡಪದ, ಹೆಚ್. ಎಫ್. ಮಸ್ಕಿ, ಚಂದ್ರೇಗೌಡ ಹರೇಟನೂರು, ಹನುಮಂತಪ್ಪ ಗೋಮರ್ಸಿ, ನರಸಪ್ಪ ಕಟ್ಟಿಮನಿ, ಮರಿಯಪ್ಪ ಸುಕಾಲಪೇಟೆ, ಮಲ್ಲನಗೌಡ ಮಾವಿನಮಡಗು, ವೆಂಕಟರೆಡ್ಡಿ, ರಾಮಕೃಷ್ಣ ಭಜಂತ್ರಿ, ಹೆಚ್.ಎನ್. ಬಡಿಗೇರ್, ಸೇರಿಂದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಬಸವ ಕೇಂದ್ರದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಕವಿತಾಳ–ಬಸವ ಜಯಂತಿ ಆಚರಣೆ



ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದ ಪಟ್ಟಣ ಪಂಚಾಯತಿಯಲ್ಲ ಇಂದು ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಆಚರಿಸಲಾಯಿತು. ಬಸವೇಶ್ವರರ ಭಾವಚಿತ್ರಕ್ಕೆ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕಿರಿಲಿಂಗಪ್ಪ ಮಾಲಾರ್ಪಣೆ ಮಾಡಿದರು.**

ನಂತರ ಮಾತನಾಡಿ‘12ನೇ ಶತಮಾನದ ವಚನಕಾರರಾದ ಬಸವೇಶ್ವರರು ಕಾಯಕವೇ ಕೈಲಾಸ ಎನ್ನುವುದನ್ನು ಸಾರುವ ಮುಲಕ ಪ್ರತಿಯೊಬ್ಬರು ತಮ್ಮತಮ್ಮ ಕಾಯಕವನ್ನು ಮಾಡುವ ಮೂಲಕ ಜೀವನದ ಶ್ರೇಷ್ಠತೆಯನ್ನು ಕಾಣುವಂತೆ ಸಾರಿದಮಹತ್ಮರು ಅಷ್ಟೆ ಅಲ್ಲ 12ನೇ ಶತಮಾನದಲ್ಲಿಯೇ ಜಾತಿ ಪದ್ದಿತಿಯನ್ನು ,ಅಸ್ಪ್ರುಶ್ಯತೆಯನ್ನು ಹೋಗಲಾಡಿಸಲು ಶ್ರಮವಹಿಸುವ ಮೂಲಕ ಅನೀಷ್ಠ ಪದ್ದಿತಿಗಳ ವಿರುದ್ಧ ಸಮರಸಾರಿದ ದರ್ಶನಿಕರು ಇವರು, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮುಲಕ ನಾವುಗಳು ಅವರ ಹಾದಿಯಲ್ಲಿ ಸಾಗಬೇಕಾಗಿದೆ’ ಎಂದರು.


ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಸದಸ್ಯ ಅಮರೇಶ ಕಟ್ಟಿಮನಿ, ನಾಮನಿರ್ದೇಶಕ ಸದಸ್ಯರಾದ ಅಯ್ಯಪ್ಪ ತೋಳ, ಅಯ್ಯಪ್ಪ ನಿಲೋಗಲ್, ಮಾಜಿ ಸದಸ್ಯರುಗಳಾದ ಮೌನೇಶ್ ಹಿರೇಕುರುಬರು, ಖಾಜಾಪಾಶಾ ಬ್ಯಾಗವಾಟ್, ಮುಖಂಡರಾದ ತಿಪ್ಪಯ್ಯಸ್ವಾಮಿ, ಓವಣ್ಣ ಕಡತಲ್, ಸುರೇಶರಡ್ಡಿ, ಚನ್ನಬಸವಸ್ವಾಮಿ, ಬಸವರಾಜ ರೊಟ್ಟಿ, ರಾಜಶೇಖರ್, ಮೌನೇಶ ಕೊಡ್ಲಿ, ಸೇರಿದಂತೆ ಇನ್ನಿತರ ಮುಖಂಡರ ಮತ್ತು ಸಿಬ್ಬಂದಿಗಳಾದ ರಾಘವೇಂದ್ರ ಮುತಾಲಿಕ್ ಇನ್ನಿತರರು ಉಪಸ್ಥಿತರಿದ್ದರು.

# ತಾಲೂಕಾಡಳಿತದಿಂದ ಬಸವ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕ ಆಡಳಿತ ತಾಲೂಕು ಪಂಚಾಯತ ಪುರಸಭೆ ತಾಳಿಕೋಟಿ ಹಾಗೂ ಶ್ರೀ ಬಸವೇಶ್ವರ ಉತ್ಸವ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವಗುರು ಬಸವಣ್ಣನವರ 893 ನೇ ಜಯಂತಿಯನ್ನು ಸೋಮವಾರ ಆಚರಿಸಲಾಯಿತು. ತಹಸಿಲ್ದಾರ ಪ್ರದೀಪ್ ದೇವಗಿರಿ ಅಧ್ಯಕ್ಷತೆ ವಹಿಸಿದ್ದರು.**

ಕಾರ್ಯಕ್ರಮದಲ್ಲಿ ತಾಪಂ ಇಒ ಅನಸೂಯಾ ಚಲವಾದಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ,ಪಿ–ಎಸ್ಐ ಜ್ಯೋತಿ ಖೋತ, ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗಮೇಶ ದೇಸಾಯಿ, ಸಹಕಾರಿ



ಬ್ಯಾಂಕ್ ನಿರ್ದೇಶಕ ಮುರಿಗೆಪ್ಪ ಸರಶಟ್ಟಿ, ಸಿಆರ್‌ಸಿ ಬಾಲಾಜಿಸಿಂಗ್ ಬಿಜಾಪುರ, ರಾಜು ವಿಜಾಪುರ, ಬಸವೇಶ್ವರ ಉತ್ಸವ ಸಮಿತಿ ಅಧ್ಯಕ್ಷ ಮಹಾಂತೇಶ ಮುರಾಳ, ಕಾಶಿನಾಥ ಮುರಾಳ, ಆರ್ ಎಸ್ ಪಾಟೀಲ (ಕೂಚಬಾಳ), ಗಂಗಾಧರ ಕಸ್ತೂರಿ, ಮಾನಸಿಂಗ್ ಕೊಕಟನೂರ,ಇಬ್ರಾಹಿಂ ಮನ್ನೂರ, ಪ್ರಕಾಶ ಹಜೇರಿ,ಅಮೀತಸಿಂಗ್ ಮನಗೂಳಿ, ಶಿವಶಂಕರ ಹಿರೇಮಠ, ವಿಜಯಸಿಂಗ್ ಹಜೇರಿ, ಪರಶುರಾಮ ತಂಗಡಗಿ, ಪ್ರಭು ಬಿಳೆಭಾವಿ, ರಾಮನಗೌಡ ಬಾಗೇವಾಡಿ, ಶರಣಗೌಡ ಪಾಟೀಲ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹಿಬೂಬ ಕೆಂಭಾವಿ, ಜಗದೀಶ ಬಿಳೆಭಾವಿ, ಸಾಹೇಬಗೌಡ ಬಿರಾದಾರ, ಡಿ.ಕೆ. ಪಾಟೀಲ,ನಾಗೇಶ ಕಟ್ಟಿಮನಿ, ಎಂ.ಕೆ. ಮೇತ್ರಿ,ಮಹಮ್ಮದ್ ಶಫೀಕ ಇನಾಮದಾರ,ನಾಗಪ್ಪ ಚಿನಗುಡಿ, ಅಶೋಕ ಜಾಲವಾದಿ,ರಾಜು ಅಲ್ಲಾಪೂರ,ಬಸವ ಸಮಿತಿಯ ಪದಾಧಿಕಾ–ರಿಗಳು ಹಾಗೂ ವಿವಿಧ ಇಲಾಖೆಗಳ ತಾಲೂಕ ಮಟ್ಟದ ಅಧಿಕಾರಿಗಳು ಇದ್ದರು.

# ಡಿಲಿಮಿಟೇಶನ್ ನೆಪದಲ್ಲಿ ಮಹಿಳಾ ಮೀಸಲಾತಿ ವಿಳಂಬ: ನಾಗರತ್ನ ಕಟ್ಟಿಮನಿ ಟೀಕೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಮಹಿಳಾ ಸಬಲೀಕರಣದ ಹೆಸ–ರಿನಲ್ಲಿ ಕೇಂದ್ರದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ (ಎನ್‌ಡಿಎ) ಸರ್ಕಾರ ಮಹಿಳೆಯ–ರಿಗೆ ಅನ್ಯಾಯ ಮಾಡುತ್ತಿದೆ ಎಂದು ಮಹಿಳಾ ಕಾಂಗ್ರೆಸ್ ಮಸ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ ಕಟ್ಟಿಮನಿ ಅವರು ಆರೋಪಿಸಿದ್ದಾರೆ.**

ಈ ಕುರಿತು ಸೋಮವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಹಿಳಾ ಮೀಸಲಾತಿ ಮಸೂದೆಯನ್ನು ತಕ್ಷಣ ಜಾರಿಗೆ ತರಬೇಕಾದ ಸಂದರ್ಭದಲ್ಲಿ ಡಿಲಿಮಿಟೇಶನ್ ಪ್ರಕ್ರಿಯೆಯ



ನೆಪದಲ್ಲಿ ಅದನ್ನು ಮುಂದೂಡುವುದು ಸ್ಪಷ್ಟವಾದ ರಾಜ–ಕೀಯ ಗಿಮಿಕ್ ಎಂದು ಆರೋಪಿಸಿದರು. ಡಿಲಿಮಿಟೇಶನ್ ಪ್ರಕ್ರಿಯೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಹಾಗೂ ಓಬಿಸಿ, ಎಸ್‌ಸಿ ಮತ್ತು ಎಸ್‌ಟಿ ಜನಾಂಗದ ಮಹಿಳೆಯರಿಗೆ ಅನ್ಯಾಯವಾಗುತ್ತದೆ ಎಂದು ಆರೋಪಿಸಿದರು. ಡಿಲಿಮಿಟೇಶನ್ ಹೆಸರಿನಲ್ಲಿ ರಾಜಕೀಯ ಆಟ ನಡೆಯಬಾರದು ಎಂಬುದು ಕಾಂಗ್ರೆಸ್‌ನ ಸ್ಪಷ್ಟ ನಿಲುವು ಎಂದು ಅವರು ಒತ್ತಾಯಿಸಿದರು. ಮುಂದಿನ ದಿನಮಾನಗಳ್ಲಿ ಮಹಿಳೆಯರ ಹಕ್ಕುಗಳಿಗಾಗಿ ರಾಜ್ಯ ಮಹಿಳಾ ಕಾಂಗ್ರೆಸ್ ಘಟಕದಿಂದ ಹೋರಾಟ ಮುಂದುವರೆಯುತ್ತದೆ ಎಂದು ಈ ಮೂಲಕ ತಿಳಿಸಿದರು.

# ಬಸವಣ್ಣ ಒಂದು ಜಾತಿಗೆ ಸೀಮಿತ ಬೇಡ: ಸಾಹಿತಿ ಪತ್ತಾರ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಬಸವ ಜಯಂತಿ ದಿನದಂದು ವಿಶ್ವಗುರು ಬಸವಣ್ಣನನ್ನು ಕೇವಲ ಪೂಜಿಸಿ, ಅದ್ದೂರಿ ಮೆರವಣಿಗೆ ತಗೆದು ಹಾಡಿ ಹೊಗಳಿದರೆ ಸಾಲದು ಅವನ ಬದುಕಿನ ಆದರ್ಶಗಳು ನಮ್ಮ ಜೀವನದ ಭಾಗವಾಗಬೇಕು ಎಂದು ಜೆಎಸ್‌ಜಿ ಫೌಂಡೇಶನ್ ಕಾರ್ಯದರ್ಶಿ ಸಾಹಿತಿ ಶ್ರೀಕಾಂತ ಪತ್ತಾರ ಹೇಳಿದರು.**

ಸೋಮವಾರ ಪಟ್ಟಣದ ಶ್ರೀ ಬಸವೇಶ್ವರ ವೃತ್ತದ ಹತ್ತಿರ ತಾಲೂಕ ಆಡಳಿತ ತಾಲೂಕು ಪಂಚಾಯತ ಪುರಸಭೆ ಹಾಗೂ ಶ್ರೀ ಬಸವೇಶ್ವರ ಉತ್ಸವ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು. ಬಸವಣ್ಣ 12ನೇ ಶತಮಾನದಲ್ಲಿ ವಚನ ಸಾಹಿತ್ಯದ ಮೂಲಕ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ವಿಶ್ವದ ಮಹಾನ್ ಚೇತನ. ಅವನನ್ನು ಒಂದು ಜಾತಿಗೆ ಸೀಮಿತಗೊಳಿಸುವುದು ಅಕ್ಷಮ್ಯ ಅಪರಾಧವಾಗಿದೆ.




ಎಲ್ಲರೂ ನನ್ನವರೆನ್ನುವ ವಿಶ್ವಭಾತೃತ್ವ ಹಾಗೂ ಎನಗಿಂತ ಕಿರಿಯರಿಲ್ಲ ಎಂಬ ವಿನಮ್ರ ಪ್ರಭಾವದಿಂದ ಜಗತ್ತನ್ನೇ ಬೆಳಗಿದ ಜಗಜ್ಯೋತಿ.ಇಡೀ ವಿಶ್ವಕ್ಕೆ ಕಾಯಕ ತತ್ವವನ್ನು ಸಾರಿದ ಶ್ರೇಷ್ಠ ಮಾನವತಾವಾದಿ ಬಸವಣ್ಣನವರ ಬದುಕಿನ ಅಧ್ಯಯನ ಇಂದಿನ ಅಗತ್ಯವಾಗಿದೆ, ನಮ್ಮ ಯುವ ಪೀಳಿಗೆಗೆ ಅವರ ಚಿಂತನೆಗಳನ್ನು ತಿಳಿಸಿಕೊಡುವ ಕಾರ್ಯ ನಾವೆಲ್ಲರೂ ಒಗ್ಗೂಡಿ ಮಾಡಬೇಕಾಗಿದೆ ಅಂತಹದೊಂದು ಆತ್ಮವಲೋಕನಕ್ಕೆ ಇಂದಿನ ಈ ಜಯಂತಿ ಕಾರ್ಯಕ್ರಮ ಸಾಕ್ಷಿಯಾಗಲಿ ಎಂದು ತಿಳಿಸಿದರು.

ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಮಾತನಾಡಿ ವಿಶ್ವದ ಮೊದಲ ಪ್ರಜಾಪ್ರಭುತ್ವ ಅನುಭವ ಮಂಟಪವನ್ನು ಜಾರಿಗೆ ತಂದ ಜಗಜ್ಯೋತಿ ವಿಶ್ವಗುರು ಸಂಸ್ಕೃತಿಕ ನಾಯಕ ಬಸವಣ್ಣನವರನ್ನು ಜಗತ್ತಿಗೆ ಪರಿಚಯಿಸುವ ಕಾರ್ಯ ನಾವೆಲ್ಲರೂ ಮಾಡಬೇಕಾಗಿದೆ ಎಂದರು. ತಹಸಿಲ್ದಾರ್ ಪ್ರದೀಪ ದೇವಗಿರಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.ಸಿಆರ್‌ಸಿ ರಾಜು ವಿಜಾಪುರ ಕಾರ್ಯಕ್ರಮ ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಸಾಹಿತಿ, ಖ್ಯಾತವಾಗ್ಮಿ ಶ್ರೀಕಾಂತ ಪತ್ತಾರ ಹಾಗೂ ಕಾರ್ಯಕ್ರಮದ ಯಶಸ್ವಿಗೆ ಸಹಕ–ರಿಸಿದ ಮಹನೀಯರನ್ನು ತಾಲೂಕ ಆಡಳಿತದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ತಾಪಂ ಇಒ ಅನಸೂಯಾ ಚಲವಾದಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ,ಪಿಎಸ್‌ಐ ಜ್ಯೋತಿ ಖೋತ, ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗಮೇಶ ದೇಸಾಯಿ, ಸಹಕಾರಿ ಬ್ಯಾಂಕ್ ನಿರ್ದೇಶಕ ಮುರಿಗೆಪ್ಪ ಸರಶಟ್ಟಿ, ಬಸವೇಶ್ವರ ಉತ್ಸವ ಸಮಿತಿ ಅಧ್ಯಕ್ಷ ಮಹಾಂತೇಶ ಮುರಾಳ, ಕಾಶಿನಾಥ ಮುರಾಳ, ಆರ್ ಎಸ್ ಪಾಟೀಲ (ಕೂಚಬಾಳ), ಗಂಗಾಧರ ಕಸ್ತೂರಿ, ಮಾನಸಿಂಗ್ ಕೊಕಟನೂರ,ಇಬ್ರಾಹಿಂ ಮನ್ನೂರ, ಪ್ರಕಾಶ ಹಜೇರಿ, ಅಮೀತಸಿಂಗ್ ಮನಗೂಳಿ, ಶಿವಶಂಕರ ಹಿರೇಮಠ,

ವಿಜಯಸಿಂಗ್ ಹಜೇರಿ, ಪರಶುರಾಮ ತಂಗಡಗಿ, ಸಾಹೇಬಗೌಡ ಬಿರಾದಾರ, ಶರಣಗೌಡ ಪಾಟೀಲ, ಪ್ರಭು ಬಿಳೆಭಾವಿ, ರಾಮನಗೌಡ ಬಾಗೇವಾಡಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹಿಬೂಬ ಕೆಂಭಾವಿ, ಜಗದೀಶ ಬಿಳೆಭಾವಿ, ಡಿ.ಕೆ. ಪಾಟೀಲ,ನಾಗೇಶ ಕಟ್ಟಿಮನಿ, ಎಂ.ಕೆ. ಮೇತ್ರಿ,ಮಹಮ್ಮದ್ ಶಫೀಕ ಇನಾಮದಾರ,ನಾಗಪ್ಪ ಚಿನಗುಡಿ, ಅಶೋಕ ಜಾಲವಾದಿ,ರಾಜು ಅಲ್ಲಾಪೂರ,ಬಸವ ಸಮಿತಿಯ ಪದಾಧಿಕಾ–ರಿಗಳು ಹಾಗೂ ವಿವಿಧ ಇಲಾಖೆಗಳ ತಾಲೂಕ ಮಟ್ಟದ ಅಧಿಕಾರಿಗಳು ಇದ್ದರು. ಭಾವಚಿತ್ರದ ಮೆರವಣಿಗೆ: ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ರಾಜವಾಡೆಯಿಂದ ಶ್ರೀ ಬಸವೇಶ್ವರ ವೃತ್ತದವರೆಗೆ ಶ್ರೀ ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಆಹಾರ ತಂತ್ರಜ್ಞಾನದಲ್ಲಿ ಬಿಟೆಕ್

ಆಹಾರ ತಂತ್ರಜ್ಞಾನದಲ್ಲಿ ಬಿಟೆಕ್ 4 ವರ್ಷಗಳ ಪದವಿಪೂರ್ವ ಎಂಜಿನಿಯರಿಂಗ್ ಪದವಿಯಾಗಿದೆ. ಆಹಾರ ಮತ್ತು ಪಾನೀಯ ಉತ್ಪನ್ನಗಳ ಆಯ್ಕೆ, ಸಂಸ್ಕರಣೆ, ಪ್ಯಾಕೇಜಿಂಗ್ ಮತ್ತು ಸಂಗ್ರಹಣೆಗೆ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನದ ತತ್ವಗಳನ್ನು ಹೇಗೆ ಅನ್ವಯಿಸಬೇಕು ಎಂಬುದರ ಕುರಿತು ಇದು ನಿಮಗೆ ವಿವರವಾದ ಜ್ಞಾನವನ್ನು ನೀಡುತ್ತದೆ. ಇದು ಪ್ರಾಯೋಗಿಕ, ಪ್ರಯೋಗಾಲಯಗಳು ಮತ್ತು ಇಂಟರ್ನ್‌ಶಿಪ್‌ಗಳ ಮೂಲಕ ಪ್ರಾಯೋಗಿಕ ತರಬೇತಿಯ ಮೇಲೂ ಕೇಂದ್ರೀಕರಿಸುತ್ತದೆ. ಆಹಾರ ತಂತ್ರಜ್ಞಾನ ಬಿ.ಟೆಕ್ ಪಠ್ಯಕ್ರಮವು ಆಹಾರ ಸಂಸ್ಕರಣೆಯ ತತ್ವಗಳು, ಆಹಾರ ಸೂಕ್ಷ್ಮ ಜೀವವಿಜ್ಞಾನ, ಆಹಾರ ರಸಾಯನಶಾಸ್ತ್ರ, ಆಹಾರ ಉತ್ಪನ್ನಗಳ ಪ್ಯಾಕೇಜಿಂಗ್ ಮತ್ತು ಆಹಾರ ಗುಣಮಟ್ಟ ಮತ್ತು ವಿಶ್ಲೇಷಣೆಯಂತಹ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ. ಬಿ ಟೆಕ್ ಆಹಾರ ತಂತ್ರಜ್ಞಾನ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು, ವಿದ್ಯಾರ್ಥಿಗಳು 12 ನೇ ತರಗತಿಯಲ್ಲಿ ಉತ್ತೀರ್ಣರಾಗಬೇಕು ಮತ್ತು ನಂತರ ಜೆಇಇ ಮುಖ್ಯ, ಐಸಿಎಆರ್ ಎಐಇಇಎ, ಎಂ-ಎಚ್‌ಟಿ ಸಿಇಟಿ, ಸಿಯುಇಟಿ, ಇತ್ಯಾದಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಕೋರ್ಸ್ ನಂತರ ವಿದ್ಯಾರ್ಥಿಗಳು ಆಹಾರ ತಂತ್ರಜ್ಞಾನದಲ್ಲಿ ಎಂಟೆಕ್, ಎಂಎಸ್ಸಿ ಆಹಾರ ವಿಜ್ಞಾನ, ಎಂಬಿಎ, ಪಿಜಿ ಡಿಪ್ಲೊಮಾ ಮತ್ತು ಪಿಎಚ್‌ಡಿಯಲ್ಲಿ ಹೆಚ್ಚಿನ ಅಧ್ಯಯನವನ್ನು ಮುಂದುವರಿಸಬಹುದು. ಕೋರ್ಸ್ ಮುಗಿದ ನಂತರ, ವಿದ್ಯಾರ್ಥಿಗಳು ಆಹಾರ ವಿಶ್ಲೇಷಣೆ, ಆಹಾರ ಉತ್ಪನ್ನ ಅಭಿವೃದ್ಧಿ, ಆಹಾರ ಸಂಸ್ಕರಣೆ ಮತ್ತು ಪ್ಯಾಕೇಜಿಂಗ್, ಆಹಾರ ನಾವೀನ್ಯತೆ ಮತ್ತು ಉದ್ಯಮಶೀಲತಾ ಕೌಶಲ್ಯಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸುತ್ತಾರೆ. ಬಿ.ಟೆಕ್ ಪದವೀಧರರು ಈ ಕೋರ್ಸ್ ಪೂರ್ಣಗೊಳಿಸಿದ ನಂತರ ಆಹಾರ ತಂತ್ರಜ್ಞರು, ಆಹಾರ ವಿಜ್ಞಾನಿಗಳು, ಪೌಷ್ಟಿಕಾಂಶ ತಜ್ಞರು, ಆಹಾರ ಸುರಕ್ಷತಾ ಅಧಿಕಾರಿ, ಉತ್ಪನ್ನ ಅಭಿವೃದ್ಧಿ ತಜ್ಞರಂತಹ ಬಹು ವೃತ್ತಿಗಳನ್ನು ಕೈಗೊಳ್ಳಬಹುದು ಮತ್ತು INR 5 LPA - INR 10 LPAವರೆಗೆ ಸಂಬಳವನ್ನು ಗಳಿಸಬಹುದು.

## ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಹೋಗಬೇಕಿದ್ದ ವಿಮಾನದಲ್ಲಿ ಗೊಂದಲ, ಬೆಂಗಳೂರಿನಲ್ಲಿ ಲ್ಯಾಂಡ್

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ಪ್ರತಿಕೂಲ ಹವಾಮಾನದಿಂದಾಗಿ ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಹೋಗುತ್ತಿದ್ದ ಫ್ಲೇ-91 ವಿಮಾನವನ್ನು ಬೆಂಗಳೂ-ರಿಗೆ ತಿರುಗಿಸಲಾಯಿತು, ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ಹೇಳಿದ್ದಾರೆ. ನಿನ್ನೆ ವಿಮಾನವು ಮೂರು ಗಂಟೆಗಳ ಕಾಲ ಗಾಳಿಯಲ್ಲಿಯೇ ಇದ್ದ ಕಾರಣ ಈ ಘಟನೆಯು ಪ್ರಯಾಣಿಕರಲ್ಲಿ ಭಯಭೀತತೆಯನ್ನು ಉಂಟುಮಾಡಿತು.ಭಯಭೀತರಾದ ಕೆಲವು ಪ್ರಯಾಣಿಕರು ಕಣ್ಣೀರು ಸುರಿಸುತ್ತಾ ತಮ್ಮ ಸುರಕ್ಷತೆಗಾಗಿ ಪ್ರಾರ್ಥಿಸಲು ಪ್ರಾರಂಭಿಸಿದರು.**



ಹೈದರಾಬಾದ್‌ನಿಂದ ಸುಮಾರು 3.30 ಕ್ಕೆ ಹೊರಟ ವಿಮಾನವು ಸಂಜೆ 4.30 ಕ್ಕೆ ಹುಬ್ಬಳ್ಳಿಯಲ್ಲಿ ಇಳಿಯಬೇಕಿತ್ತು ಆದ-ರೆ ಪ್ರತಿಕೂಲ ಹವಾಮಾನದಿಂದಾಗಿ ಅದು ಸಾಧ್ಯವಾಗಲಿಲ್ಲ ಎಂದು ಮೂಲಗಳು ತಿಳಿಸಿವೆ.ಕೆಟ್ಟ ಹವಾಮಾನದಿಂದಾಗಿ, ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಹೋಗುತ್ತಿದ್ದ ವಿಮಾನವನ್ನು ಬೆಂಗಳೂರಿಗೆ ತಿರುಗಿಸಲಾಯಿತು ಎಂದು ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ, ಅಂತಹ ಮಾರ್ಗ ಬದಲಾವಣೆಗಳು ಪ್ರಮಾಣಿತ ಸುರಕ್ಷತಾ ಕ್ರಮವಾಗಿದೆ. ಅಧಿಕಾರಿಯ ಪ್ರಕಾರ, ವಿಮಾನವು ಹವಾಮಾನ ಪರಿಸ್ಥಿತಿಗಳಲ್ಲಿ ಸುಧಾರಣೆಯ ನಿರೀಕ್ಷೆಯಲ್ಲಿ ಸುಮಾರು ಒಂದು ಗಂಟೆ ಹುಬ್ಬಳ್ಳಿಯ ಮೇಲೆ ಸುಳಿದಾಡಿತು, ನಂತರ ಅದನ್ನು ತಿರುಗಿಸಲಾಯಿತು.ಇದು ಸಾಮಾನ್ಯ ಅಭ್ಯಾಸ. ಹವಾಮಾನ ಸುಧಾರಿಸುವವರೆಗೆ ವಿಮಾನವು ಸ್ವಲ್ಪ ಸಮಯದವರೆಗೆ ಗಾಳಿಯಲ್ಲಿ ಸುತ್ತುತ್ತದೆ. ಇದು ಪೈಲಟ್‌ನ ನಿರ್ಧಾರ ಎಂದು ಅವರು ಹೇಳಿದರು. ನಂತರ ವಿಮಾನವು ಸಂಜೆ 6.30 ರ ಸುಮಾರಿಗೆ ಬೆಂಗಳೂರಿನಲ್ಲಿ ಇಳಿದು, ಹವಾಮಾನ ಪರಿಸ್ಥಿತಿ ಸುಧಾರಿಸಿದ ನಂತರ ರಾತ್ರಿ 11 ಗಂಟೆ ಸುಮಾರಿಗೆ ಹುಬ್ಬಳ್ಳಿಗೆ ಹಿಂತಿರುಗಿತು ಎಂದು ಅಧಿಕಾರಿ ಹೇಳಿದರು.ವಿಮಾನದಲ್ಲಿ 22 ಪ್ರಯಾಣಿಕರು ಇದ್ದರು ಎಂದು ಮೂಲಗಳು ತಿಳಿಸಿವೆ. ಮುಂಬೈನಿಂದ ಕೊಲ್ಹಾಪುರಕ್ಕೆ ಹೋಗುವ ಮತ್ತೊಂದು ವಿಮಾನವನ್ನು ಹವಾಮಾನ ವೈಪರೀತ್ಯದಿಂದಾಗಿ ಗೋವಾಕ್ಕೆ ತಿರುಗಿಸಲಾಗಿದೆ ಎಂದು ಅಧಿಕಾ-ರಿಗಳು ತಿಳಿಸಿದ್ದಾರೆ.ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ.

## ಮಸ್ಕಿ ತಾಲ್ಲೂಕು ಪಂಚಾಯತಿ ನೂತನ ಕಟ್ಟಡಕ್ಕೆ ಶಾಸಕ ಆರ್. ಬಸನಗೌಡರಿಂದ ಶಂಕುಸ್ಥಾಪನೆ

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ಬಹುದಿನದ ಭೇಡಿಕೆಯಾಗಿದ್ದ ತಾಲ್ಲೂಕು ಪಂಚಾಯತಿ ಸ್ವಂತ ಕಟ್ಟಡಕ್ಕೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಆರ್.ಬಸನಗೌಡ ತುರವಿಹಾಳ ಸೋಮವಾರ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೇರವೆರಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಪಟ್ಟಣದ ವೆಂಕಟಾಪೂರು ರಸ್ತೆಯಲ್ಲಿರುವ ನೂತನ ತಾ.ಪಂ ಕಛೇರಿ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದೆ.**

ನೂತನ ಕಟ್ಟಡಕ್ಕೆ ಜಿಲ್ಲಾ ಪಂಚಾಯಿತಿ 50 ಲಕ್ಷ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ 2025-26ನೇ ಸಾಲಿನ ಮೈಕ್ರೋ ಯೋಜನೆ ಅಡಿಯಲ್ಲಿ 3.50 ಕೋಟಿ ಒಟ್ಟು 4 ಕೋಟಿ ರೂ.ಗಳ ವೆಚ್ಚದಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗಿದ್ದು, ಅನುದಾನ ಹಂತ ಹಂತವಾಗಿ ಬಿಡುಗಡೆಯಾಗುತ್ತದೆ. ಕಟ್ಟಡದ ನಿರ್ವಹಣೆಯನ್ನು



ಕ್ಯಾಷುಟೆಕ್ ನಿರ್ಮಿತಿ ಕೇಂದ್ರ ವಹಿಸಲಾಗಿದ್ದು, ಕಾಲಾವಧಿಯೊಳಗೆ ಕಟ್ಟಡ ನಿರ್ಮಾಣ ಕಾಮಗಾ-ರಿನ್ನು ಗುಣಮಟ್ಟದಿಂದ ನಿರ್ಮಿಸಿ ಸಾರ್ವಜನಿಕರ ಅನುಕೂಲಕ್ಕೆ ನೀಡುವಂತೆ ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ನಂತರ ತಾಲ್ಲೂಕು ಪಂಚಾಯತಿ ಇಒ ಅಮರೇಶ ಯಾದವ ಮಾತನಾಡಿ ಪ್ರಸುತ್ತತಾ.ಪಂ ಕಟ್ಟಡದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕೆಲಸ ಮಾಡುವುದು ಕಷ್ಟಕರವಾಗಿ-ತ್ತು. ಇದನ್ನು ಪರಿಗಣಿಸಿ ಹೊಸ ಕಟ್ಟಡಕ್ಕೆ ಭುಮಿ ಹುಡುಕಿ ಅನುಮೋದನೆ ತರುವಲ್ಲಿ ಬಹಳಷ್ಟು ಶ್ರಮಪಟ್ಟಿದ್ದೇವೆ. ಇನ್ಮುಂದೆ ಅಧಿಕಾರಿಗಳು ಸುಗಮವಾಗಿ ಕರ್ತವ್ಯ ನಿರ್ವಹಿಸಿ ಜನಪರ ಕೆಲಸ ಮಾಡಬೇಕೆಂದು ಹೇಳಿದರು. ಗುತ್ತಿಗೆದಾರರು ಅದಷ್ಟು ಬೇಗ ಕಾಮಗಾರಿ ಕೈಗೆತ್ತಿಕೊಂಡು ಅವಧಿ ಒಳಕೆ ಗುಣಮಟ್ಟದ ಕಾಮಗಾರಿ ಪೂರ್ನಗೊಳಿಸಿ ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಕ್ಯಾಷುಟೆಕ್ ನಿರ್ಮಿತಿ ಕೇಂದ್ರದ ಇಎಎ ಕೌಸರ್, ಅಧ್ಯಕ್ಷ ಸುರೇಶ ಹರಸೂರು, ಮಹಿಬೂಬಸಾಬ ಮುದ್ದಾಪುರ, ತಹಸೀಲ್ದಾರ ಮಂಜುನಾಥ ಬೋಗಾವತಿ, ತಾ.ಪಂ. ಇಒ ಅಮರೇಶ ಯಾದವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ ಯದ್ದಲದಿನ್ನಿ, ಹನುಮಂತಪ್ಪ ಮುದ್ದಾಪೂರ, ಪ್ರಮುಖರಾದ ಅಂ-ದಾನಪ್ಪ ಗುಂಡಳ್ಳಿ, ವೆಂಕಟರಡ್ಡಿ ಹಾಲಾಪೂರು, ಎಂ.ಅಮರೇಶ, ಮಲ್ಲಯ್ಯ ಬಳ್ಳಾ, ಹನುಮಂತಪ್ಪ ವೆಂಕಟಾಪೂರು, ದೊಡ್ಡ ಕರಿಯಪ್ಪ, ಬಿ.ಜಿ.ನಾಯಕ, ಬಸವರಾಜ ಬುಕ್ಕಣ್ಣ, ಕೃಷ್ಣ ಚಿಗರಿ, ಆನಂದ ವೀರಾಪೂರ, ವೆಂಯೋಬ ನಾಯಕ, ಆಲಂಭಾಷ ಗೋನಾಳ, ನೂರ್ ಆಹ್ಮದ್, ತಾಲ್ಲೂಕು ಪಂಚಾಯತಿ ಅಧಿಕಾರಿಗಳಾದ ಶಿವಾನಂದರಡ್ಡಿ, ಸೋಮಶೇಖರ, ಗಂಗಾಧರಮೂರ್ತಿ, ಚಂದ್ರಶೇಖರ, ಬಸವರಾಜ, ಪ್ರಕಾಶ ಸೇರಿದಂತೆ ಇನ್ನಿತರೆ ಅಧಿಕಾ-ರಿಗಳು ಮತ್ತು ಪಕ್ಷದ ಕಾರ್ಯಕರ್ತರಿದ್ದರು.

## ಹಳ್ಳಿಹೊಸೂರು ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ಪಟ್ಟಕ್ಕೆ ಹಾಕುವುದು ಹಾಗೂ ಭಂಡಾರ ಸಮರ್ಪಣ ಮಹೋತ್ಸವ




**ನೈಜ್ಯ ದೆಸೆ ನ್ಯೂಸ್**

ಮಾನವಿ: ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿರವಾರ ತಾಲೂಕಿನ ಶ್ರೀ ಘನ ಗುರು ಬೀರಲಿಂಗೇಶ್ವರ ದೇವಸ್ಥಾನ, ಹಳ್ಳಿಹೊಸೂರು ಗ್ರಾಮದಲ್ಲಿ ಈ ದಿನ ನಡೆದ ಶ್ರೀ ಬೀರಲಿಂಗೇಶ್ವರ **ಪಟ್ಟಕ್ಕೆ ಹಾಕುವುದು ಹಾಗೂ ಭಂಡಾರ ಸಮರ್ಪಣ ಕಾರ್ಯಕ್ರಮವು ಭಕ್ತಿಭಾವದಿಂದ ನೆರವೇರಿತು.**

ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರಾದ ಸನ್ಮಾನ್ಯ ಶ್ರೀ ಎನ್. ಎಸ್. ಬೋಸರಾಜು ಅವರು ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರು ಭಾಗವಹಿಸಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮಾತನಾಡಿದ ನಾಯಕರು, ಗ್ರಾಮೀಣ ಭಾಗಗಳಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿ-ಕ ಪರಂಪರೆಗಳು ಸಮಾಜದಲ್ಲಿ ಐಕ್ಯತೆ, ನಂಬಿಕೆ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಿದರು.

ಇಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜದ ಏಕತೆ ಹಾಗೂ ಭಕ್ತಿಯ ಪರಂಪರೆಯನ್ನು ಉಳಿಸುವಲ್ಲಿ ಮಹತ್ವದ್ದಾಗಿವೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ನಗರಸಭೆಯ ಮಾಜಿ ಸದಸ್ಯರಾದ ಜಯಣ್ಣ, ಶಿವಮೂರ್ತಿ, ರುದ್ರಪ್ಪ ಅಂಗಡಿ, ಅಮರೇಗೌಡ ಹಂಚಿನಾಳ, ಬಸವರಾಜ ಪಾಟೀಲ್ ಅತನೂರ್, ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷರಾದ ಎಂ. ಈರಣ್ಣ ಗುತ್ತೇದಾರರು, ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿ.ಕೆ. ಅಮರೇಶಪ್ಪ ವಕೀಲರು, ಕೆ. ಬಸವಂತಪ್ಪ, ಚುಕ್ಕಿ ಸುಗಪ್ಪ ಸಾಹುಕಾರ್ ಸಿರವಾರ, ಎಚ್.ಕೆ. ಅಂಬರೀಶಪ್ಪ ಸಾಹುಕಾರ್ ಸಿರವಾರ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಮಾಳಪ್ಪ ಕವಿತಾಳ, ಶಿವಪ್ಪಗೌಡ ಹಳ್ಳಿಹೊಸೂರು ಸೇರಿದಂತೆ ಅನೇಕ ಮುಖಂಡರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

## ಶ್ರೀ ಜಗಜ್ಯೋತಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಶಾಸಕ ಹಂಪನಗೌಡ ಬಾದರ್ಲಿ ಭಾಗಿ

### ಸಿಂಧನೂರು ಭಾಗದ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ದೊರಕಲಿ ಎಂದು ಆಶಯ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಸಿಂಧನೂರು ನಗರದಲ್ಲಿ ನೂತನವಾಗಿ ಆರಂಭಗೊಂಡಿರುವ ಶ್ರೀ ಜಗಜ್ಯೋತಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಪ್ರಾರಂಭೋತ್ಸವ ಕಾರ್ಯಕ್ರಮವು ಭಕ್ತಿಪೂರ್ವಕ ಹಾಗೂ ವಿಜೃಂಭಣೆಯಿಂದ ನೆರವೇ-ರಿತು. ಕಾರ್ಯಕ್ರಮದಲ್ಲಿ ಸಿಂಧನೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಭಾಗವಹಿಸಿ ಆಸ್ಪತ್ರೆಯನ್ನು ಉದ್ಘಾಟಿಸಿ ಸಂಸ್ಥೆಯ ಯಶಸ್ವಿ ಸೇವೆಗೆ ಶುಭ ಹಾರೈಸಿದರು.**

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕರು, "ಜನಸೇವೆಯೇ ಜನಾರ್ದನ ಸೇವೆ" ಎಂಬ ಧ್ಯೇಯದೊಂದಿಗೆ ಆರೋಗ್ಯ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಸೇವಾ ಸಂಸ್ಥೆ ಆರಂಭವಾಗಿರುವುದು ಸಂತೋಷಕರ



ಬೆಳವಣಿಗೆಯಾಗಿದೆ ಎಂದು ಹೇಳಿದರು. ಗ್ರಾಮೀಣ ಹಾಗೂ ನಗರ ಪ್ರದೇಶದ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ಸಿಗುವುದು ಅತ್ಯಂತ ಅವಶ್ಯಕವಾಗಿದ್ದು, ಈ ಆಸ್ಪತ್ರೆ ಸಿಂಧನೂರು ಭಾಗದ ಜನರಿಗೆ ಸಮಗ್ರ ಆರೋಗ್ಯ ಸೇವೆ ನೀಡುವ ಪ್ರಮುಖ ಕೇಂದ್ರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆಧುನಿಕ ವೈದ್ಯಕೀಯ ಉಪಕರಣಗಳು, ಪರಿಣಿತ ವೈದ್ಯರ ತಂಡ, ತುರ್ತು ಚಿಕಿತ್ಸೆ ವ್ಯವಸ್ಥೆ ಹಾಗೂ ವಿವಿಧ ವಿಶೇಷ ವಿಭಾಗಗಳ ಸೇವೆಗಳನ್ನು ಒದಗಿಸುವ ಮೂಲಕ ಜನರಿಗೆ



ಸಮೀಪದಲ್ಲೇ ಉತ್ತಮ ಚಿಕಿತ್ಸೆ ಸಿಗಲಿದೆ. ಇದ-ರಿಂದ ದೂರದ ನಗರಗಳಿಗೆ ತೆರಳುವ ಅವಶ್ಯಕತೆ ಕಡಿಮೆಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಆಸ್ಪತ್ರೆ ಆಡಳಿತ ಮಂಡಳಿ ಸದಸ್ಯರು, ವೈದ್ಯರು, ಗಣ್ಯರು, ಸಮಾಜದ ಮುಖಂಡರು, ಸಾರ್ವಜನಿಕರು ಹಾಗೂ ಆರೋಗ್ಯ ಕ್ಷೇತ್ರದ ಸಿಬ್ಬಂದಿ ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದರು.

## ಹಾಲಾಪೂರ: ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಜಯಂತಿ ಆಚರಣೆ

**ನೈಜ್ಯ ದೆಸೆ ನ್ಯೂಸ್**

**ಹಾಲಾಪೂರ: ಗ್ರಾಮದ ಶ್ರೀ ಬಸವೇಶ್ವರರ ದೇವಸ್ಥಾನದಲ್ಲಿ ಗ್ರಾಮಸ್ಥರಿಂದ ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತಿ ಅಂಗವಾಗಿ ಪೂಜಾ ಕಾರ್ಯಕ್ರಮ ನಡೆಯಿತು. ಶ್ರೀ ಬಸವೇಶ್ವರರು ಹನ್ನೆರಡನೇ ಶತಮಾನದ ಶರಣರ ಸಾಲಿನಲ್ಲಿ ಬಹುವ್ಯಕ್ತಿತ್ವ ಪುರುಷರಾಗಿ ಪ್ರಸಿದ್ಧ ಪಡೆದವರು,**

ಸಾಮಾಜಿಕ ಸುಧಾರಣೆ, ಲಿಂಗ ತಾರತಮ್ಯ, ಜಾತಿ ವ್ಯವಸ್ಥೆ, ಮೂಡನಂಬಿಕೆಗಳ ವಿರುದ್ಧ ಧ್ವನಿ ಎತ್ತಿದವರು, ಸಮಾನತೆಗಾಗಿ



ಸಮಾಜದಲ್ಲಿ ಶ್ರಮಿಸಿದ ಮಹಾನ್ ಪಂಡಿತರು, ಇವರು ವಚನಗಳ ಮೂಲಕ ಅನುಭವ ಮಂಟಪ ಸಾಧಿಸಿ ಇದನ್ನು ವಿಶ್ವದ ಸಂಸತ್ತು ಎಂದು ಕರೆದು, ಮುಂದೆ ಅವರು ಜಗಜ್ಯೋತಿ ಬಸವೇಶ್ವರರು ಎಂದು ಖ್ಯಾತಿ ಪಡೆದಿದ್ದರು. ಈ ವೇಳೆಯಲ್ಲಿ ಬಸನಗೌಡ ಮಾ.ಪಾ, ದುರಗಪ್ಪ ನಾಯಕ, ಪ್ರಕಾಶ ಸಾವುಕರ, ಮೌನೇಶ ಮರಾಠ, ಶಂಕರಗೌಡ ತುಂಟಾಪುರ, ಚನ್ನಬಸವ ಮಾ.ಪಾ, ಅಮರೇಶ ತುಂಟಾಪುರ, ಗಿರೀಶ ದಿನ್ನಿ, ಸೂಗರೆಡ್ಡಿ, ಬಸವ ತುಂಟಾಪುರ ಹಾಗೂ ಇನ್ನಿತರರು ಇದ್ದರು.

# ಬಸವ ಜಯಂತಿ ಅಂಗವಾಗಿ ಬಸವಣ್ಣನವರ ಭಾವಚಿತ್ರ ಮೆರವಣಿಗೆ

## ಪರಿಪೂರ್ಣ ಸಮಾನತೆಯ ಸಮಾಜ ತತ್ವವನ್ನು ಪ್ರತಿಪಾದಿಸಿದ ಕೀರ್ತಿ ಬಸವಣ್ಣ ಅವರದ್ದು :ವರರುದ್ರಮುನಿ ಶಿವಾಚಾರ್ಯರು

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ಭಾರತೀಯ ಇತಿಹಾಸದಲ್ಲಿ ಪರಿಪೂರ್ಣ ಸಮಾನತೆಯ ಸಮಾಜ ತತ್ವವನ್ನು ಪ್ರತಿಪಾದಿಸಿದ ಕೀರ್ತಿ ಬಸವಣ್ಣ ಅವರದ್ದು ಎಂದು ಗಚ್ಚಿನಮಠದ ವರರುದ್ರಮುನಿ ಶಿವಾಚಾರ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಪಟ್ಟಣದ ಭ್ರಮರಾಂಬ ದೇವಸ್ಥಾನದಲ್ಲಿ ಬಳಿ ಸೋಮವಾರ ಹಮ್ಮಿಕೊಂಡಿದ್ದ ಬಸವಣ್ಣನವರ 893ನೇ ಜಯಂತಿಯ ಅಂಗವಾಗಿ ಬಸವಣ್ಣನ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು ಅವರು, 12ನೇ ಶತಮಾನದ ಅಂದಿನ ಸಮಾಜ ತಾರ ತಮ್ಯದಿಂದ ಕೂಡಿತ್ತು.**

ಶೋಷಿತರು, ದೀನದಲಿ ತರು ಹಾಗೂ ಮಹಿಳೆಯರು ಅಭಿವ್ಯಕ್ತಿ ಸ್ವಾತಂತ್ರ?ಯ ವಿಲ್ಲದೆ ತಮ್ಮ ದನಿಯನ್ನೇ ಕಳೆದುಕೊಂಡಿದ್ದರು. ಅಂತಹ ಸಂದರ್ಭದಲ್ಲಿ ಬಸವಣ್ಣನವರು ಅನುಭವ ಮಂಟಪದ ಮೂಲಕ ಸಮಾಜದ ಕಟ್ಟಕಡೆಯವರನ್ನು ಒಂದೆಡೆ ಕಲೆಹಾಕಿ ತಮ್ಮ ಸರಳ ವಚನ ಸಾಹಿತ್ಯದ ಮೂಲಕ ಎಲ್ಲರನ್ನು ಜಾಗೃತ ಗೊಳಿಸಿದರು. ಅ ಮೂಲಕ ಸಮಾನತೆಯ



ತತ್ವ ವಿಚಾರಗಳಿಗೆ ಮುನ್ನುಡಿ ಬರೆದ ಬಸವಣ್ಣ ಅವರು ಶ್ರೇಷ್ಠ ಸಮಾಜ ಸುಧಾರಕರಾದರು ಎಂದು ಹೇಳಿದರು. ನಂತರ ಶಾಸಕ ಆರ್.ಬಸನಗೌಡ ತುರವಿಹಾಳ ಮಾತನಾಡಿ ಕಾಯಕವೇ ಕೈಲಾಸ ತತ್ವದಡಿ ಎಲ್ಲರೂ ಸಮಾನರು. ಯಾವುದೇ ಕೆಲಸದಲ್ಲಿ ಮೇಲು ಕೀಳಿಲ್ಲ ಎಂದು ಸಾರಿದ ಬಸವಣ್ಣ ಅವರು ಸಾಮಾಜಿಕ ಕ್ರಾಂತಿಯ ಹರಿಕಾರರು ಹೌದು.

ದೇಶದಲ್ಲಿ ಅನುಭವ ಮಂಟಪದ ಮೂಲಕ ಸಾಮೂಹಿಕ ಶಿಕ್ಷಣಕ್ಕೆ ಚಾಲನೆ ನೀಡಿದವರಲ್ಲಿ ಬಸವಣ್ಣ ಮೊದಲಿಗರು. ವಿದ್ಯೆಯಿಂದ ವಂಚಿರಾದವರಿಗೆ,

> **ಸಾಮಾಜಿಕ ಕ್ರಾಂತಿಯ ಹರಿಕಾರರು ಹೌದು. ದೇಶದಲ್ಲಿ ಅನುಭವ ಮಂಟಪದ ಮೂಲಕ ಸಾಮೂಹಿಕ ಶಿಕ್ಷಣಕ್ಕೆ ಚಾಲನೆ ನೀಡಿದವರಲ್ಲಿ ಬಸವಣ್ಣ ಮೊದಲಿಗರು.**
> **-ಆರ್ ಬಸನಗೌಡ ತುರುವಿಹಾಳ ಶಾಸಕರು ಮಸ್ಕಿ.**

ಮಹಿಳೆಯರಿಗೆ ಅಲ್ಲಿ ಶಿಕ್ಷಣ ಹಾಗೂ ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ಅವಕಾಶ ಮಾಡಿಕೊಟ್ಟು ಸಾಮಾಜಿ-ಕ ಬದಲಾವಣೆಗೆ ಕಾರಣರಾದರು. ಅವರು ಅಂದು ಸ್ಥಾಪಿಸಿದ ಅನುಭವ ಮಂಟಪದ ಮಾದರಿಯೇ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆ. ಅವರ ತತ್ವ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು. ಈ ಮೊದಲು ತಾಲೂಕಾಡಳಿತದಿಂದ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣ ಪ್ರತಿಮೆಗೆ ಶಾಸಕ ಬಸನಗೌಡ ತುವಿಹಾಳ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್, ತಹಸೀಲ್ದಾರ್ ಮಂಜುನಾಥ ಭೊಗಾವತಿ, ತಾ.ಪಂ ಇಒ ಅಮರೇಶ ಸೇ-ರಿದಂತೆ ಅನೇಕರು ಮಾಲಾರ್ಪಣೆ ಮಾಡಿದರು.

ಮೆರವಣಿಗೆ: ಭ್ರಮರಾಂಬ ದೇವಸ್ಥಾನದ ಬಳಿ ಬಸವಣ್ಣನವರ ಭಾವಚಿತ್ರ ಮೆರವಣಿಗೆಗೆ ಗಚ್ಚಿನಮಠದ ವರರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಮೆರವಣಿಗೆಯು ಕನಕವೃತ್ತ, ದೈವದ ಕಟ್ಟೆ, ಖಲೀಲವೃತ್ತದ ಮುಖಾಂತರ ಹಳೇ ಬಸ್ ನಿಲ್ದಾಣದಿಂದ ಪುನಃ ಶ್ರೀಭ್ರಮರಾಂಬ ದೇವಸ್ಥಾನಕ್ಕೆ ತಲುಪಿತು. ಮೆರವಣಿಗೆಯಲ್ಲಿ ಶಾಸಕ ಆರ್.ಬಸನಗೌಡ ತುರ್ವಿಹಾಳ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ, ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಮಹಿಬೂಬಸಾಬ ಮುದ್ದಾಪುರ, ತಹಸೀಲ್ದಾರ ಮಂಜುನಾಥ ಬೋಗಾವತಿ, ತಾ.ಪಂ. ಇಒ ಅಮರೇಶ ಯಾದವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ ಯದ್ದಲದಿನ್ನಿ, ಹನುಮಂತಪ್ಪ ಮುದ್ದಾಪೂರ, ಪ್ರಮುಖರಾದ ಅಂದಾನಪ್ಪ ಗುಂಡಳ್ಳಿ, ಡಾ.ಬಿ.ಎಚ್.ದಿವಟರ್, ದುರುಗಣ್ಣ ಶಿಕ್ಷಕರು, ವೀರೇಶ ಸೌದ್ರಿ, ಸುಕುಮುನಿಯಪ್ಪ ನಾಯಕ, ಪಂಪಣ್ಣ ಅಂತರಗಂಗಿ, ಎಂ.ಅಮರೇಶ, ಮೌನೇಶ ಮುರಾರಿ, ತಿಪ್ಪಣ್ಣ ಯಂಬಲದ, ಬಸವರಾಜ ಮಿಟ್ಟಿಮನಿ, ಮಲೇಶಪ್ಪ ಬ್ಯಾಳಿ, ಮಹಾಂತೇಶ ಮಸ್ಕಿ, ಆದಯ್ಯಸ್ವಾಮಿ ಕ್ಯಾತ್ನಟ್ಟಿ, ಸೂಗಣ್ಣ ಬಾಳೆಕಾಯಿ, ಶರಣಯ್ಯ ಸೊಪ್ಪಿಮಠ, ನಾಗರಾಜ ಯಂಬಲದ ಹಾಗೂ ಇತರರು ಭಾಗವಹಿಸಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.